# ಗಣಿತ

## 4. ಗಣಿತ ವಿಷಯದಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

ಗಣಿತದ ಸಂಕುಚಿತ ಗುರಿ ಅಂಕೆ-ಸಂಖ್ಯೆಗಳ ಜ್ಞಾನ, ಭಿನ್ನರಾಶಿ, ಮೂಲಭೂತ ಕ್ರಿಯೆಗಳು, ಅಳತೆಗಳು, ಅನುಪಾತ, ಶೇಕಡಾ ಮುಂತಾದ ಅಂಶಗಳನ್ನು ಮಾತ್ರ ಒಳಗೊಂಡಿದೆ. ಗಣಿತದ ಉನ್ನತ ಗುರಿ ಆಂತರಿಕ ಸಂಪನ್ಮೂಲಗಳನ್ನು ಹೆಚ್ಚಿಸುವುದು, ಚಿಂತನೆಗೆ ಒಳಪಡಿಸುವುದು, ನಿಖರತೆ, ಸ್ಪಷ್ಟತೆ, ತಾರ್ಕಿಕವಾದ ಆಲೋಚನೆಗಳನ್ನು ಅಭಿವೃದ್ಧಿಪಡಿಸುವುದಾಗಿದೆ. ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಮತ್ತು ಧನಾತ್ಮಕವಾಗಿ ಪರಿಹರಿಸುವಂತೆ ಸಮರ್ಥಗೊಳಿಸುವ ಉನ್ನತ ಗುರಿಯೂ ಗಣಿತ ಹೊಂದಿದೆ. ಗಣಿತದ ಪಠ್ಯಕ್ರಮದಲ್ಲಿ ವಿವಿಧ ನವೀನ ಗಣಿತ ಕಲಿಸುವ ವಿಧಾನ ಮತ್ತು ಕೌಶಲಗಳನ್ನು ಅಳವಡಿಸುವುದು ಎಷ್ಟು ಅಗತ್ಯವೋ, ಅಷ್ಟೇ ಅತ್ಯಗತ್ಯವಾದುದು ಮೌಲ್ಯಮಾಪನದಲ್ಲಿ ಬದಲಾವಣೆ. ಅದಕ್ಕಾಗಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಅತ್ಯವಶ್ಯಕ.

### ಶಾಲಾ ಗಣಿತದ ದೃಷ್ಟಿಕೋನ :

1. ಗಣಿತದ ಕಲಿಕೆಯಲ್ಲಿ ಮಗು ಸಮಸ್ಯೆಗಳನ್ನು ಕಂಠಪಾಠ ಮಾಡಿದ ಸೂತ್ರ ಬಳಸಿ ಯಾಂತ್ರಿಕವಾಗಿ ಮಾಡದೇ, ಸಹಜವಾದ ವಿಧಾನಗಳಿಂದ ಬಿಡಿಸುವ ತಂತ್ರಗಳನ್ನು ಬೆಳೆಸಬೇಕು. ಇದರಿಂದ ಗಣಿತದ ಕಲಿಕೆಯು ಮಕ್ಕಳಿಗೆ ಸಂತಸದಾಯಕವಾಗಿ ಅದರಲ್ಲಿ ಅಭಿರುಚಿ ಬೆಳೆಯುತ್ತದೆ.

2. ಗಣಿತದ ತರಗತಿಯಲ್ಲಿ ಮಕ್ಕಳು ತಮ್ಮೊಳಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳಲು, ಚರ್ಚೆ ಮಾಡಲು, ಮತ್ತು ಒಂದು ಗೂಡಿ ಸಮಸ್ಯೆಗಳನ್ನು ಬಿಡಿಸಲು ಶಿಕ್ಷಕರು ಅನುಕೂಲಿಸಬೇಕು.

3. ಮಕ್ಕಳೂ ಅರ್ಥಪೂರ್ಣವಾಗಿ ಸಮಸ್ಯೆಗಳನ್ನು ಬಿಡಿಸುವ ಮತ್ತು ಲೆಕ್ಕಗಳನ್ನು ಸೃಷ್ಟಿಸುವ ಮನೋಶಕ್ತಿಯನ್ನು ಬೆಳೆಸಬೇಕು.

4. ಗಣಿತವು ಮಕ್ಕಳಲ್ಲಿ ಅಮೂರ್ತವಾಗಿ ಆಲೋಚಿಸುವ, ಸಂಬಂಧಗಳನ್ನು ಗ್ರಹಿಸುವ, ರಚನೆಗಳನ್ನು ಅರ್ಥಮಾಡಿಕೊಳ್ಳುವ, ಕಾರಣಗಳನ್ನು ತಿಳಿದುಕೊಳ್ಳುವ, ಸತ್ಯಾಸತ್ಯತೆಗಳನ್ನು ಪರಾಮರ್ಶಿಸುವ ಮತ್ತು ತರ್ಕಬದ್ಧವಾಗಿ ಆಲೋಚಿಸುವ ಗುಣಗಳನ್ನು ಬೆಳೆಸಬೇಕು.

ಈ ದೃಷ್ಟಿಕೋನವನ್ನು ಸಾಕಾರಗೊಳಿಸಬೇಕಾದಲ್ಲಿ ಮಗು ತಾನು ಪಡೆಯುತ್ತಿರುವ ಗಣಿತದ ಮಾಹಿತಿಯನ್ನಷ್ಟೇ ಅಳೆಯುವುದಲ್ಲ. ಆದರೆ ಮಗು ಗಣಿತದಲ್ಲಿ ಹೊಂದಿರುವ ಜ್ಞಾನ, ಕೌಶಲ, ಆಸಕ್ತಿ ಹಾಗೂ ಮನೋಭಾವನೆಯನ್ನು ನಿರಂತರವಾಗಿ ಅವಲೋಕಿಸಿ ಮಗುವನ್ನು ವಿವಿಧ ಆಯಾಮಗಳಲ್ಲಿ ಅರ್ಥೈಸಿಕೊಳ್ಳುವುದು ಮತ್ತು ಹಿಮ್ಮಾಹಿತಿಯ ಮೂಲಕ ಮಗುವಿನ ಬೆಳವಣಿಗೆಗೆ ಸಹಕರಿಸುವುದು ಅಗತ್ಯ.

### ಗಣಿತದ ಬೋಧನೆ ಮತ್ತು ಕಲಿಕೆಯಲ್ಲಿನ ಸಮಸ್ಯೆಗಳು:

ಗಣಿತದ ಕಲಿಕಾ ಪ್ರಕ್ರಿಯೆಯನ್ನು ವಿಶ್ಲೇಷಿಸಿದಾಗ ಮುಖ್ಯವಾಗಿ ಕೆಲವು ಸಮಸ್ಯೆಗಳು ಕಂಡುಬರುತ್ತದೆ. ಅವುಗಳೆಂದರೆ :

1. ಬಹುತೇಕ ಮಕ್ಕಳಿಗೆ ಗಣಿತವನ್ನು ಒಂದು ಮಾಹಿತಿ ನೀಡುವ ವಿಷಯವಾಗಿ ತಿಳಿಸುತ್ತಿರುವುದರಿಂದ ಅವರು ಕಲಿಕೆಯಲ್ಲಿ ಗಣಿತ ಭಯ ಮತ್ತು ವೈಫಲ್ಯಗಳನ್ನು ಹೊಂದಿರುತ್ತಾರೆ.

2. ಗಣಿತದ ಮೌಲ್ಯಮಾಪನ ಮತ್ತು ಪರೀಕ್ಷಾ ಪದ್ಧತಿಯು ಮಕ್ಕಳ ನೈಜ ವಿಚಾರಗಳಿಗೆ ಆಸ್ಪದ ಕೊಡದೇ, ಕೇವಲ ಯಾಂತ್ರಿಕ ವಿಧಾನಗಳ ಲೆಕ್ಕಾಚಾರಗಳನ್ನು ಒಳಗೊಂಡಿದೆ.

3. ಪಠ್ಯಪುಸ್ತಕ ಕೇಂದ್ರಿತ ಆಚರಣೆಗಳು ಶಿಕ್ಷಕರ ಹೊಸತನ ಮತ್ತು ಸ್ವಂತಿಕೆಯನ್ನು ಕುಂಠಿತಗೊಳಿಸಿವೆ.

4. ಶಿಕ್ಷಕರು ಹೊಸ ವಿಧಾನ ಬಳಸದೇ ತಾವು ಹಿಂದೆ ಕಲಿತ ವಿಧಾನಗಳಿಂದಲೇ ಗಣಿತ ಬೋಧನೆ ಮಾಡುತ್ತಿದ್ದಾರೆ.

ನಿತ್ಯ ಜೀವನದಲ್ಲಿ ಗಣಿತವು ಎಲ್ಲಾ ಹಂತಗಳಲ್ಲೂ ಯಶಸ್ಸಿಗೆ ಅತ್ಯವಶ್ಯಕವೆಂದು ಅರಿತು ರಾಷ್ಟ್ರೀಯ ಪಠ್ಯಕ್ರಮ – 2005 ಗಣಿತವು ಕೇವಲ ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡು ಸಿದ್ಧಾಂತಗಳನ್ನು ನಿರೂಪಿಸಿ, ಪ್ರಮೇಯಗಳನ್ನು ಸಾಧಿಸಿ, ಲೆಕ್ಕಗಳನ್ನು ಮಾಡಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸುವುದಷ್ಟೇ ಅಲ್ಲ, ಗಣಿತವನ್ನು ಜೀವನದ ಸಕಲ ಕ್ಷೇತ್ರಗಳಲ್ಲೂ ಬಳಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದಾಗಿದೆ. ಎಂಬುದಾಗಿ ಒತ್ತಿ ಹೇಳುತ್ತದೆ. ಈ ಸಾಮರ್ಥ್ಯಗಳ ಮಾಪನ ಕೇವಲ ಪೆನ್ ಮತ್ತು ಹಾಳೆಯ ಲಿಖಿತ ಪರೀಕ್ಷೆಗಳಿಂದ ಸಾಧ್ಯವಿಲ್ಲ. ಅದಕ್ಕಾಗಿ ಮೌಲ್ಯಮಾಪನ ನಿರಂತರ ಮತ್ತು ವ್ಯಾಪಕವೇ ಆಗಬೇಕೆಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಹೇಳುತ್ತದೆ.

## ಗಣಿತದ ಕ್ಷೇತ್ರಗಳು, ವಲಯಗಳು, ಉದ್ದಿಷ್ಟಗಳು ಮತ್ತು ನಿರ್ದಿಷ್ಟಗಳು :

ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಗಣಿತ ವಿಷಯವನ್ನು ಮೂರು ಪ್ರಮುಖ ಕ್ಷೇತ್ರಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಅಂಕಗಣಿತ, ಬೀಜಗಣಿತ, ರೇಖಾಗಣಿತ. ಈ ವಿಭಾಗಗಳಲ್ಲಿನ ಮೌಲ್ಯಮಾಪನ ವಲಯಗಳು, ಉದ್ದಿಷ್ಟಗಳು ಹಾಗೂ ಕಲಿಕಾ ಮಾನಕಗಳನ್ನು (ನಿರ್ದಿಷ್ಟಗಳನ್ನು) ಶಿಕ್ಷಕರ ಪುನರಾವಲೋಕನಕ್ಕೆ ನೀಡಲಾಗಿದೆ.

**ಸೂಚನೆ :** 5 ರಿಂದ 8 ನೇ ತರಗತಿಯಲ್ಲಿನ ಪ್ರಮುಖ ಕಲಿಕಾ ಮಾನಕಗಳನ್ನು (ನಿರ್ದಿಷ್ಟಗಳನ್ನು) ಇಲ್ಲಿ ನೀಡಲಾಗಿದ್ದು, ಇವು ಉದಾಹರಣೆಗಳು ಮಾತ್ರ. ಶಿಕ್ಷಕರು ತಮ್ಮ ವಿಷಯದಲ್ಲಿ ಕಲಿಕಾ ಮಾನಕಗಳನ್ನು ಅಗತ್ಯಕ್ಕೆ ತಕ್ಕಂತೆ ರೂಪಿಸಿಕೊಳ್ಳಬಹುದು.

ಗಣಿತದ ಅಂಕಗಣಿತ, ಬೀಜಗಣಿತ ಮತ್ತು ರೇಖಾಗಣಿತ ಸೇರಿದ ವಿಷಯಕ್ಕೆ ಭಾವನಾತ್ಮಕ ವಲಯದ ಆಯಾಮಗಳನ್ನು ಗುರುತಿಸಿ ಮಾನಕಗಳನ್ನು ಒಟ್ಟಾಗಿ ಈ ಕೆಳಗೆ ಉದಾಹರಣೆಯಾಗಿ ನೀಡಲಾಗಿದೆ. ಇವುಗಳೊಂದಿಗೆ ಶಿಕ್ಷಕರು ಸಾಕಷ್ಟು ಅಂಶಗಳನ್ನು ರೂಪಿಸಿಕೊಳ್ಳಬಹುದು.

| ವಲಯಗಳು | ಉದ್ದೇಶಗಳು | ಮಾನಕಗಳು |
|---|---|---|
| ಭಾವನಾತ್ಮಕ ವಲಯ (ತೊಡಗಿಸಿಕೊಳ್ಳುವಿಕೆ) | ತೊಡಗಿಸಿಕೊಳ್ಳುವಿಕೆ<br>ಆಸಕ್ತಿ<br>ಮನೋಧೋರಣೆ<br>ಮೌಲ್ಯಗಳು | * ಭಾರತೀಯ ಗಣಿತಜ್ಞರ ಬಗ್ಗೆ ಮಾಹಿತಿ ಸಂಗ್ರಹಿಸುವುದು.<br>* ಸಂಖ್ಯೆಯಲ್ಲಿನ ವಿನ್ಯಾಸವನ್ನು ಅರ್ಥೈಸಿಕೊಂಡು ಆನಂದಿಸುವರು.<br>* ದಿನನಿತ್ಯದ ಜೀವನದಲ್ಲಿ ಅಂಕೆ–ಸಂಖ್ಯೆಗಳು, ಗಣಿತದ ಮೂಲಕ್ರಿಯೆಗಳು ಹಾಸು ಹೊಕ್ಕಾಗಿರುವುದನ್ನು ಅರಿಯುವರು.<br>* ನಕ್ಷೆಗಳನ್ನು ಅರ್ಥೈಸಿಕೊಳ್ಳುವುದರೊಂದಿಗೆ ಪರಿಸರ ಕಾಳಜಿಯಂತಹ ಮೌಲ್ಯಗಳನ್ನು ಬಳಸಿಕೊಳ್ಳುತ್ತಾರೆ.<br>* ಅಂಕಗಣಿತದ ಅನ್ವಯ ಇತರ ವಿಷಯಗಳ ಅಧ್ಯಯನಕ್ಕೆ ಸಹಕರಿಸುತ್ತದೆ ಎಂದು ಪ್ರಶಂಸಿಸುವರು.<br>* ಗಣಿತ ಕಲಿಕೆಯಿಂದ ನಿಖರತೆ, ಕ್ರಮಬದ್ಧತೆಯನ್ನು ಕಲಿಯುವರು.<br>* ಗಣಿತದ ಕಲಿಕೆಯಿಂದ ಆತ್ಮವಿಶ್ವಾಸವನ್ನು ಹೊಂದುವರು.<br>* ಗಣಿತದಲ್ಲಿನ ವಿನೋದವನ್ನು ಮೋಜಿನ ಗಣಿತದ ಮೂಲಕ ಆಹ್ಲಾದಿಸುವರು.<br>* ಸಮೀಕರಣಗಳನ್ನು ನಕ್ಷಾರೂಪವನ್ನು ನೀಡುವಲ್ಲಿ ಆಸಕ್ತಿಯನ್ನು ತೋರಿಸುತ್ತಾರೆ.<br>* ಸಾಮಾನ್ಯ ಸೂತ್ರಗಳ ಪ್ರಯೋಜನವನ್ನು ಪ್ರಶಂಸಿಸುವರು.<br>* ನಮ್ಮ ಸುತ್ತಮುತ್ತಲಿನಲ್ಲಿರುವ ವಸ್ತುಗಳನ್ನು ರೇಕಾಕೃತಿಗಳೊಂದಿಗೆ ಹೋಲಿಸುವರು.<br>* ರೇಖಾಕೃತಿಗಳ ವಿವಿಧ ವಿನ್ಯಾಸವನ್ನು ರಚಿಸುವ ಆಸಕ್ತಿ ತೋರಿಸುವರು.<br>* ರೇಖಾಗಣಿತಕ್ಕೆ ಭಾರತೀಯ ಗಣಿತಜ್ಞರ ಕೊಡುಗೆಗಳನ್ನು ಸಂಗ್ರಹಿಸುವರು.<br>* ಗಣಿತಜ್ಞರ ಪುಸ್ತಕ ಸಂಗ್ರಹಿಸಿ ಅವರ ಜೀವನ ಚರಿತ್ರೆ ಓದುವರು. |

ಮೇಲ್ಕಂಡ ಕೋಷ್ಟಕದಲ್ಲಿ ಗಣಿತದ ಭಾವನಾತ್ಮಕ ವಲಯದ ಮಾನಕ ಅರ್ಥಾತ್ ಸೂಚಕಗಳನ್ನು ಗಮನಿಸಿದ್ದೇವೆ. ಉಳಿದ ಜ್ಞಾನಾತ್ಮಕ ಮತ್ತು ಮನೋಜನ್ಯ ವಲಯಗಳನ್ನು ಮುಂದೆ ಒಮ್ಮೆ ಅವಲೋಕಿಸುವ.

**ವಿಷಯ : ಗಣಿತ** **ಕ್ಷೇತ್ರ : ಅಂಕಗಣಿತ**

| ವಲಯಗಳು | ಉದ್ದೇಶಗಳು | ಮಾನಕಗಳು |
|---|---|---|
| ಜ್ಞಾನಾತ್ಮಕ ವಲಯ | ಅರ್ಥೈಸಿಕೊಳ್ಳುವಿಕೆ ಗ್ರಹಿಕೆ | * ಗುರುತಿಸುವವರು : ಸಂಖ್ಯೆಗಳಲ್ಲಿ ಅಂಕಿಗಳ ಸ್ಥಾನ, ಸ್ಥಾನಬೆಲೆ, ದೊಡ್ಡ ಸಂಖ್ಯೆ, ಚಿಕ್ಕ ಸಂಖ್ಯೆ, ಸೂತ್ರ, ಭಿನ್ನರಾಶಿಯ ವಿಧಗಳು, ಸಂಕೇತಗಳು, ಚಿಹ್ನೆಗಳು ಇತ್ಯಾದಿಗಳನ್ನು ಗುರುತಿಸುವರು.<br>* ಅರ್ಥೈಸಿಕೊಳ್ಳುವರು : ಅಂಕಿಗಳು, ಸಂಖ್ಯೆಗಳು, ವ್ಯಾಖ್ಯೆಗಳು, ಸೂತ್ರಗಳು, ಭಿನ್ನರಾಶಿ, ದಶಮಾಂಶ, ಶೇಕಡಾಮಾನ ಪದಗಳನ್ನು, ಭಿನ್ನರಾಶಿಗಳ ವಿಧಗಳನ್ನು ಗಣಪದದ ಅರ್ಥವನ್ನು, ಗಣಗಳ ವಿಧಗಳನ್ನು, ಸೋಡಿ, ದಲ್ಲಾಳಿ, ರಿಯಾಯಿತಿ ಲಾಭ, ನಷ್ಟ ಪದಗಳನ್ನು ಅರ್ಥೈಸಿಕೊಳ್ಳುವರು.<br>* ಉದಾಹರಣೆ ನೀಡುವರು : ಗಣ, ಭಿನ್ನರಾಶಿ, ದಶಮಾಂಶ, ಶೇಕಡಾಮಾನ, ಅನುಪಾತಗಳಿಗೆ ಉದಾಹರಣೆ ನೀಡುವರು.<br>* ಸಂಬಂಧ ಕಲ್ಪಿಸುವರು : ಅನುಪಾತದಲ್ಲಿನ ಪದಗಳಿಗೆ ಸಂಬಂಧ ಕಲ್ಪಿಸುವರು.<br>* ವರ್ಗೀಕರಿಸುವರು : ಭಾಜ್ಯ–ಅವಿಭಾಜ್ಯ, ಸರಿ–ಬೆಸ ಸಂಖ್ಯೆಗಳನ್ನು, ಭಾಗಲಬ್ಧ ಅಭಾಗಲಬ್ಧ ಸಂಖ್ಯೆಗಳನ್ನು, ಸಮಗಣ ಮತ್ತು ಸಮಾನಗಣಗಳನ್ನು ವರ್ಗೀಕರಿಸುವರು.<br>* ವ್ಯಾಖ್ಯೆಗಳನ್ನು ಸಂಕೇತಗಳಿಂದ ಸೂಚಿಸುವರು.<br>* ವಾಸ್ತವಾಂಶಗಳು, ಪರಿಕಲ್ಪನೆಗಳು, ಸಂಬಂಧಗಳ ಬಗ್ಗೆ ವಿವರಣೆ ನೀಡುವರು.<br>* ಲೆಕ್ಕಾಚಾರ ಮಾಡುವರು.<br>* ಉತ್ತರಗಳನ್ನು ತಾಳೆ ನೋಡುವರು.<br>* ಕಾರಣ ನೀಡುವರು.<br>* ಸಾಮಾನ್ಯೀಕರಿಸಿ ಸಂಬಂಧ ನಿರೂಪಿಸುವರು : ಒಂದು ಗಣದಲ್ಲಿರುವ ಗಣಾಂಶಗಳ ಸಂಖ್ಯೆಗಳು ಮತ್ತು ಉಪಗಣಗಳ ಸಂಖ್ಯೆಗಳ ಸಂಬಂಧವನ್ನು ಸಾಮಾನ್ಯೀಕರಿಸುವರು.<br>* ಚಿತ್ರಗಳು, ಪರಿಕಲ್ಪನೆಗಳ ವ್ಯತ್ಯಾಸ ಗುರುತಿಸುವರು.<br>* ಸಮಸ್ಯಾ ಪರಿಹಾರದ ಸೂತ್ರ ಅಥವಾ ಸೂಕ್ತ ಕ್ರಮವನ್ನು ಆಯ್ಕೆ ಮಾಡುವರು. ಕೊಟ್ಟಿರುವ ಸಮಸ್ಯೆ ಪರಿಹರಿಸಲು ಇರುವ ಸೂಕ್ತ ಸೂತ್ರ ಆಯ್ಕೆ ಮಾಡುವರು.<br>* ಉತ್ತರಗಳನ್ನು ಸೂಕ್ತ ಏಕಮಾನದಿಂದ ಸೂಚಿಸುವರು.<br>* ವಿಶ್ಲೇಷಿಸುವರು : ದತ್ತಾಂಶಗಳನ್ನು ವಿಶ್ಲೇಷಿಸಿ ಸೂಕ್ತ ಪರಿಹಾರವನ್ನು ಕಂಡುಹಿಡಿಯುವರು. |
| ಜ್ಞಾನಾತ್ಮಕ | ಅನ್ವಯ | * ಸಮಸ್ಯೆ ಬಿಡಿಸುವ ಪರ್ಯಾಯ ವಿಧಾನ ತಿಳಿಯುವರು.<br>* ದತ್ತಾಂಶಗಳನ್ನು ಸಂಗ್ರಹಿಸುವರು.<br>* ದತ್ತಾಂಶಗಳಿಗೆ ಸಂಬಂಧ ಕಲ್ಪಿಸುವರು.<br>* ದತ್ತಾಂಶಗಳನ್ನು ಹೋಲಿಸಿ ಸಾಮಾನ್ಯೀಕರಿಸುವರು.<br>* ಅಂದಾಜು ಮೌಲ್ಯ ನಿರ್ಧರಿಸುವರು.<br>* ಸಮಸ್ಯಾ ಪರಿಹಾರಕ್ಕೆ ಅಗತ್ಯ ಆಧಾರಾಂಶಗಳನ್ನು ನಿರ್ಧರಿಸುವರು. |

| | | |
|---|---|---|
| | | * ಮಾನಸಿಕ ಲೆಕ್ಕಾಚಾರ ಮಾಡಿ ತಕ್ಷಣ ಉತ್ತರಿಸುವರು.<br>* ಸಮಸ್ಯೆಗಳನ್ನು ಬಿಡಿಸಲು ಅವಶ್ಯಕ ಮತ್ತು ಅನಾವಶ್ಯಕ ಹಂತಗಳ ವ್ಯತ್ಯಾಸ ಗುರುತಿಸುವರು. |
| ತೊಡಗಿಸಿಕೊಳ್ಳುವಿಕೆ | ಕೌಶಲ | * ಕೋಷ್ಟಕ, ನಕ್ಷೆ, ಚಾರ್ಟ್‌ಗಳನ್ನು ಸ್ಪಷ್ಟವಾಗಿ ಬೇಗನೆ ಓದುವರು.<br>* ತರ್ಕಾನುಸಾರ ದೃಢೀಕರಿಸುವರು.<br>* ಸೂಕ್ತ ಕೋಷ್ಟಕಗಳನ್ನು ರಚನೆ ಮಾಡಿಕೊಳ್ಳುವರು.<br>* ವಾಕ್ಯರೂಪದಲ್ಲಿನ ಸಮಸ್ಯೆಗಳನ್ನು ಸಂಕೇತದಿಂದ ಸೂಚಿಸುವರು.<br>* ತರ್ಕಾನುಸಾರ ದೃಢೀಕರಿಸುವರು.<br>* ಸೂಕ್ತವಾದ ಬೆಲೆಗಳನ್ನು ಸೂತ್ರದಲ್ಲಿ ಆದೇಶಿಸುವರು.<br>* ಅಳತೆಗಳನ್ನು ನಿಖರವಾಗಿ ಮಾಡುವರು. |

**ವಿಷಯ : ಗಣಿತ** **ಕ್ಷೇತ್ರ : ಬೀಜಗಣಿತ**

| ವಲಯಗಳು | ಉದ್ದೇಶಗಳು | ಮಾನಕಗಳು |
|---|---|---|
| ಜ್ಞಾನಾತ್ಮಕ | ಅರ್ಥೈಸಿಕೊಳ್ಳುವಿಕೆ | * ಸ್ಮರಿಸುವುದು : ನಿಯಮಗಳು, ನಿತ್ಯ ಸಮೀಕರಣಗಳು ಇತ್ಯಾದಿಗಳನ್ನು ಸ್ಮರಿಸುವರು.<br>* ಅರ್ಥೈಸಿಕೊಳ್ಳುವರು : ಪರಿಕಲ್ಪನೆಗಳು<br>* ಗುರುತಿಸುವರು : ಬೀಜಪದಗಳು, ಬೀಜೋಕ್ತಿಗಳು, ಸಹಗುಣಕಗಳು ಇತ್ಯಾದಿಗಳನ್ನು ಗುರುತಿಸುವರು.<br>* ಉದಾಹರಣೆ ನೀಡುವರು.<br>* ಸಂಬಂಧ ಕಲ್ಪಿಸುವರು.<br>* ವರ್ಗೀಕರಿಸುವರು : ಬೀಜೋಕ್ತಿಗಳನ್ನು, ಬೀಜಪದಗಳನ್ನು, ಸಮೀಕರಣಗಳನ್ನು ವರ್ಗೀಕರಿಸುವರು.<br>* ವ್ಯಾಖ್ಯೆಗಳನ್ನು ಸಂಕೇತಗಳಿಂದ ಸೂಚಿಸುವರು. ವಾಸ್ತವಾಂಶಗಳು, ಪರಿಕಲ್ಪನೆಗಳು, ಸಂಬಂಧಗಳ ಬಗ್ಗೆ ವಿವರಣೆ ನೀಡುವರು.<br>* ಲೆಕ್ಕಾಚಾರ ಮಾಡುವರು.<br>* ಉತ್ತರಗಳನ್ನು ತಾಳೆ ನೋಡುವರು.<br>* ಕಾರಣ ನೀಡುವರು : ಕೊಟ್ಟಿರುವ ಬೀಜೋಕ್ತಿಯು ಬಹುಪದೋಕ್ತಿಯೆಂದು ಕಾರಣೀಕರಿಸುವರು.<br>* ಸಾಮಾನ್ಯೀಕರಿಸಿ ಸಂಬಂಧ ನಿರೂಪಿಸುವರು.<br>* ಚಿತ್ರಗಳು, ಪರಿಕಲ್ಪನೆಗಳ ವ್ಯತ್ಯಾಸ ಗುರುತಿಸುವರು.<br>* ಸಮಸ್ಯಾ ಪರಿಹಾರದ ಸೂತ್ರ ಅಥವಾ ಸೂಕ್ತಕ್ರಮವನ್ನು ಆಯ್ಕೆ ಮಾಡುವರು.<br>* ವಿಶ್ಲೇಷಿಸುವರು : ದತ್ತಾಂಶಗಳನ್ನು ವಿಶ್ಲೇಷಿಸಿ ಸೂಕ್ತ ಪರಿಹಾರವನ್ನು ಕಂಡುಹಿಡಿಯುವರು. |
| | ಅನ್ವಯ | * ಸಮಸ್ಯೆ ಬಿಡಿಸುವ ಪರ್ಯಾಯ ವಿಧಾನ ತಿಳಿಯುವರು.<br>* ದತ್ತಾಂಶಗಳಿಗೆ ಸಂಬಂಧ ಕಲ್ಪಿಸುವರು.<br>* ದತ್ತಾಂಶಗಳನ್ನು ಸಂಗ್ರಹಿಸುವರು.<br>* ದತ್ತಾಂಶಗಳನ್ನು ಹೋಲಿಸಿ ಸಾಮಾನ್ಯೀಕರಿಸುವರು.<br>* ಅಂದಾಜು ಮೌಲ್ಯ ನಿರ್ಧರಿಸುವರು.<br>* ಸಮಸ್ಯಾ ಪರಿಹಾರಕ್ಕೆ ಅಗತ್ಯ ಆಧಾರಾಂಶಗಳನ್ನು ನಿರ್ಧರಿಸುವರು. |

| | | |
|---|---|---|
| ತೊಡಗಿಸಿಕೊಳ್ಳುವಿಕೆ | ಕೌಶಲ | * ಮಾನಸಿಕ ಲೆಕ್ಕಾಚಾರ ಮಾಡಿ ತಕ್ಷಣ ಉತ್ತರಿಸುವರು.<br>* ಸಮಸ್ಯೆಗಳನ್ನು ಬಿಡಿಸಲು ಅವಶ್ಯಕ ಮತ್ತು ಅನಾವಶ್ಯಕ ಹಂತಗಳ ವ್ಯತ್ಯಾಸ ಗುರುತಿಸುವರು.<br>* ಸಮೀಕರಣವನ್ನು ನಕ್ಷಾರೂಪದಲ್ಲಿ ರಚಿಸುವರು.<br>* ತರ್ಕಾನುಸಾರ ದೃಢೀಕರಿಸುವರು.<br>* ಸೂಕ್ತ ಕೋಷ್ಟಕಗಳನ್ನು ರಚನೆ ಮಾಡಿಕೊಳ್ಳುವರು.<br>* ವಾಕ್ಯರೂಪದಲ್ಲಿನ ಸಮಸ್ಯೆಗಳನ್ನು ಸಂಕೇತದಿಂದ ಸೂಚಿಸುವರು.<br>* ಸೂಕ್ತವಾದ ಬೆಲೆಗಳನ್ನು ಸೂತ್ರದಲ್ಲಿ ಆದೇಶಿಸುವರು.<br>* ಸಮೀಕರಣಗಳಿಗೆ ನಕ್ಷಾರೂಪವನ್ನು ನೀಡುವಲ್ಲಿ ಆಸಕ್ತಿಯನ್ನು ತೋರಿಸುವರು. |

**ವಿಷಯ : ಗಣಿತ** **ಕ್ಷೇತ್ರ : ರೇಖಾಗಣಿತ**

| ವಲಯಗಳು | ಉದ್ದೇಶಗಳು | ಮಾನಕಗಳು |
|---|---|---|
| ಜ್ಞಾನಾತ್ಮಕ | ಅರ್ಥೈಸಿಕೊಳ್ಳುವಿಕೆ | * ಸ್ಮರಿಸುವುದು – ಸಿದ್ಧಾಂತಗಳು, ರೇಖಾಗಣಿತದ ಮೂಲ ಪರಿಕಲ್ಪನೆಗಳು, ರೇಖಾಕೃತಿಗಳ ಗುಣಲಕ್ಷಣಗಳನ್ನು, ಪ್ರಮೇಯಗಳ ಹೇಳಿಕೆಗಳನ್ನು, ಇತ್ಯಾದಿಗಳನ್ನು ಸ್ಮರಿಸುವರು.<br>* ಗುರುತಿಸುವರು : ರೇಖಾಕೃತಿಗಳು, ಸಂಕೇತಗಳು, ಉಪಕರಣಗಳು, ಚಿಹ್ನೆಗಳು ಇತ್ಯಾದಿಗಳನ್ನು ಗುರುತಿಸುವರು.<br>* ಉದಾಹರಣೆ ನೀಡುವರು : ಸಮಾಂತರ ಸರಳ ರೇಖೆಗಳು, ಪಾರ್ಶ್ವ ಕೋನಗಳು, ರೇಖಾಕೃತಿಗಳು.<br>* ಸಂಬಂಧ ಕಲ್ಪಿಸುವರು<br>* ವರ್ಗೀಕರಿಸುವರು : ಉದಾ : ಕೋನಗಳು, ತ್ರಿಭುಜಗಳು.<br>* ವಾಸ್ತವಾಂಶಗಳು, ಪರಿಕಲ್ಪನೆಗಳು, ಸಂಬಂಧಗಳ ಬಗ್ಗೆ ವಿವರಣೆ ನೀಡುವರು.<br>* ಲೆಕ್ಕಾಚಾರ ಮಾಡುವರು.<br>* ಕಾರಣ ನೀಡುವರು, ವೃತ್ತವು ಬಹು ಭುಜಾಕೃತಿಯಲ್ಲವೆಂದು ಕಾರಣ ನೀಡುವರು.<br>* ಲೆಕ್ಕಾಚಾರ ಮಾಡುವರು.<br>* ಕಾರಣ ನೀಡುವರು, ವೃತ್ತವು ಬಹುಭುಜಾಕೃತಿಯಲ್ಲವೆಂದು ಕಾರಣ ನೀಡುವರು.<br>* ಸಾಮಾನ್ಯೀಕರಿಸಿ ಸಂಬಂಧ ನಿರೂಪಿಸುವರು.<br>* ಚಿತ್ರಗಳು, ಪರಿಕಲ್ಪನೆಗಳ ವ್ಯತ್ಯಾಸ ಗುರುತಿಸುವರು.<br>* ಸಮಸ್ಯಾ ಪರಿಹಾರದ ಸೂತ್ರ ಅಥವಾ ಸೂಕ್ತಕ್ರಮವನ್ನು ಆಯ್ಕೆ ಮಾಡುವರು.<br>* ಉತ್ತರಗಳನ್ನು ಸೂಕ್ತ ಏಕಮಾನದಿಂದ ಸೂಚಿಸುವರು. |
| | ಅನ್ವಯ | * ವಿಶ್ಲೇಷಿಸುವರು – ದತ್ತಾಂಶಗಳನ್ನು ವಿಶ್ಲೇಷಿಸಿ ಸೂಕ್ತ ಪರಿಹಾರವನ್ನು ಕಂಡುಹಿಡಿಯುವರು.<br>* ಸಮಸ್ಯೆ ಬಿಡಿಸುವ ಪರ್ಯಾಯ ವಿಧಾನ ತಿಳಿಯುವರು.<br>* ದತ್ತಾಂಶಗಳೀಗೆ ಸಂಬಂಧ ಕಲ್ಪಿಸುವರು.<br>* ದತ್ತಾಂಶಗಳನ್ನು ಸಂಗ್ರಹಿಸುವರು. |

| | | |
|---|---|---|
| | | * ದತ್ತಾಂಶಗಳನ್ನು ಹೋಲಿಸಿ ಸಾಮಾನ್ಯೀಕರಿಸುವರು.<br>* ಅಂದಾಜು ಮೌಲ್ಯ ನಿರ್ಧರಿಸುವರು.<br>* ಸಮಸ್ಯಾ ಪರಿಹಾರಕ್ಕೆ ಅಗತ್ಯ ಆಧಾರಾಂಶಗಳನ್ನು ನಿರ್ಧರಿಸುವರು.<br>* ಮಾನಸಿಕವಾಗಿ ಲೆಕ್ಕಾಚಾರ ಮಾಡಿ ತಕ್ಷಣ ಉತ್ತರಿಸುವರು.<br>* ಸಮಸ್ಯೆಗಳನ್ನು ಬಿಡಿಸಲು ಅವಶ್ಯಕ ಮತ್ತು ಅನಾವಶ್ಯಕ ಹಂತಗಳ ವ್ಯತ್ಯಾಸ ಗುರುತಿಸುವರು. |
| ತೊಡಗಿಸಿಕೊಳ್ಳುವಿಕೆ | ಕೌಶಲ | * ಕೋಷ್ಟಕ, ನಕ್ಷೆ, ಚಾರ್ಟ್‌ಗಳನ್ನು ಸ್ಪಷ್ಟವಾಗಿ ಬೇಗನೆ ಓದುವುದು.<br>* ತರ್ಕಾನುಸಾರ ದೃಢೀಕರಿಸುವರು.<br>* ಸೂಕ್ತ ಕೋಷ್ಟಕಗಳನ್ನು ರಚನೆ ಮಾಡಿಕೊಳ್ಳುವರು.<br>* ವಾಕ್ಯರೂಪದಲ್ಲಿನ ಸಮಸ್ಯೆಗಳನ್ನು ಸಂಕೇತದಿಂದ ಸೂಚಿಸುವರು.<br>* ಅಳತೆಗಳನ್ನು ನಿಖರವಾಗಿ ಮಾಡುವರು.<br>* ಕೋಷ್ಟಕ, ನಕ್ಷೆ, ಚಾರ್ಟ್‌ಗಳ ಪ್ರಯೋಜನ ಪಡೆಯುವರು.<br>* ನಿಖರವಾದ ಅಳತೆಗಳ ಆಕೃತಿ ರಚಿಸುವರು.<br>* ಅಳತೆಗಳನ್ನು ನಿಖರವಾಗಿ ಮಾಡುವರು.<br>* ಉಪಕರಣಗಳನ್ನು ಸೂಕ್ತವಾಗಿ ಬಳಸುವರು.<br>* ನಕ್ಷೆಗಳನ್ನು ರೇಖಾಚಿತ್ರಗಳನ್ನು ಅಳತೆಗೆ ಸರಿಯಾಗಿ ರಚಿಸುವರು.<br>* ನಮ್ಮ ಸುತ್ತಮುತ್ತಲಿನಲ್ಲಿರುವ ವಸ್ತುಗಳನ್ನು ರೇಖಾಕೃತಿಗಳೊಂದಿಗೆ ಹೋಲಿಸುವರು. |

**ರೂಪಣಾತ್ಮಕ ಮೌಲ್ಯಮಾಪನ** (Formative Assessment) **ಕೈಗೊಳ್ಳುವ ವಿಧಾನಕ್ಕೆ ಉದಾಹರಣೆ :**

ಮಗುವನ್ನು ವಿವಿಧ ಆಯಾಮ ಹಾಗೂ ಸ್ತರಗಳಲ್ಲಿ, ಕಾಲಾನುಕ್ರಮದಲ್ಲಿ ಅರ್ಥೈಸಿಕೊಳ್ಳುವುದು ರೂಪಣಾತ್ಮಕ ಮೌಲ್ಯಮಾಪನದ ಪ್ರಮುಖ ಅಂಶ. ಮಕ್ಕಳು ಏನನ್ನು ಕಲಿಯುತ್ತಿದ್ದಾರೆ ಎನ್ನುವುದಕ್ಕಿಂತ ಹೇಗೆ ಕಲಿಯುತ್ತಿದ್ದಾರೆ ಎಂಬುದನ್ನು ಅರ್ಥೈಸಿಕೊಂಡು, ಕಲಿಕೆಯನ್ನು ಬೆಂಬಲಿಸುವ ಪ್ರಕ್ರಿಯೆಗೆ ರೂಪಣಾತ್ಮಕ ಮೌಲ್ಯಮಾಪನ ಒಂದು ಪ್ರಮುಖ ಸಾಧನವಾಗಿದೆ.

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದಲ್ಲಿ ರೂಪಣಾತ್ಮಕ ಮೌಲ್ಯಮಾಪನವು ಕಲಿಕೆಯ ಜೊತೆ ಜೊತೆಯಾಗಿಯೇ ಸಾಗುತ್ತದೆ. ಒಂದು ಶೈಕ್ಷಣಿಕ ವರ್ಷದಲ್ಲಿ ಪಠ್ಯ ವಿಷಯದಲ್ಲಿ ನಾಲ್ಕು ರೂಪಣಾತ್ಮಕ ಮೌಲ್ಯಮಾಪನಗಳನ್ನು (FA1, FA2, FA3, FA4) ಮತ್ತು ಎರಡು ಸಂಕಲನಾತ್ಮಕ ಮೌಲ್ಯಮಾಪನಗಳನ್ನು (SA1, SA2) ಕೈಗೊಳ್ಳಲಾಗುತ್ತದೆ.

ಗಣಿತದ ವಿಷಯದಲ್ಲಿ ರೂಪಣಾತ್ಮಕ ಮೌಲ್ಯಮಾಪನ – 1 (FA1) ವನ್ನು ಕೈಗೊಳ್ಳುವ ವಿಧಾನವನ್ನು ಅರ್ಥೈಸಲು ಒಂದು ಉದಾಹರಣೆಯೊಂದಿಗೆ ಪ್ರಯತ್ನ ಮಾಡಲಾಗಿದೆ.

**ಸೂಚನೆ :** ಉದಾಹರಣೆಯಲ್ಲಿ 5ನೇ ತರಗತಿಯಲ್ಲಿ ಮೊದಲನೆಯ ಹಂತದ ರೂಪಣಾತ್ಮಕ ಮೌಲ್ಯಮಾಪನ (FA1)ಕೈಗೊಳ್ಳಲು ಅಂಕಗಣಿತದ ಘಟಕ–1, ಘಟಕ–2 ಮತ್ತು 3, ರೇಖಾಗಣಿತದ ಘಟಕ–11ನ್ನು ಪರಿಗಣಿಸಲಾಗಿದೆ. ಆದರೆ (FA1) ಕೈಗೊಳ್ಳಲು ಅಧ್ಯಾಯಗಳ ಆಯ್ಕೆಯನ್ನು ಅಗತ್ಯತೆ ಮತ್ತು ಅವಕಾಶಗಳನ್ನು ಆಧರಿಸಿ ಶಿಕ್ಷಕರ ವಿವೇಚನೆಗೆ ಬಿಡಲಾಗಿದೆ.

ರೂಪಣಾತ್ಮಕ ಮೌಲ್ಯಮಾಪನವು ಪ್ರತಿ ತರಗತಿಯಲ್ಲಿನ ನಿರಂತರ ಪ್ರಕ್ರಿಯೆ. ಇದರಲ್ಲಿ ನಿರಂತರವಾಗಿ ನಡೆಯುವ ತರಗತಿ ಮೌಲ್ಯಮಾಪನ, ಲಿಖಿತ ಪ್ರಶ್ನೆಗಳು, ಮೌಖಿಕ ಪ್ರಶ್ನೆಗಳು, ಗೃಹ ಪಾಠಗಳು, ಚಟುವಟಿಕೆಗಳು ಸೇರಿರುತ್ತವೆ. ಇಲ್ಲಿ ಜ್ಞಾನಾತ್ಮಕ ವಲಯ ಹಾಗೂ ಮಗುವಿನ ತೊಡಗಿಸಿಕೊಳ್ಳುವಿಕೆಯನ್ನು (ಅಂದರೆ ಮೌಲ್ಯಗಳು, ಆಸಕ್ತಿ ಮತ್ತು ಮನೋಧೋರಣೆಯನ್ನು) ಮಾಪಿಸಿ ಮಗುವನ್ನು ಅರ್ಥೈಸಿಕೊಳ್ಳಲಾಗುತ್ತದೆ. ವಿವಿಧ ಚಟುವಟಿಕೆಗಳು/ತಂತ್ರಗಳು ಮತ್ತು ಸೂಕ್ತ ಸಾಧನಗಳನ್ನು ಬಳಸಿ ಈ ಮೌಲ್ಯಮಾಪನ ಕೈಗೊಳ್ಳಲಾಗಿದೆ.

ಈಗ ನೀಡಿರುವ ಕೆಳಗಿನ ಉದಾಹರಣೆಗಳಲ್ಲಿ ಪ್ರತಿ ಅಧ್ಯಾಯಕ್ಕೆ ಹತ್ತು ಅಂಶಗಳನ್ನು ನಿಗದಿಪಡಿಸಿಕೊಳ್ಳಲಾಗಿದೆ. ಜ್ಞಾನಾತ್ಮಕ ವಲಯ ಮತ್ತು ಭಾವನಾತ್ಮಕ ವಲಯಗಳನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲವಾದರೂ ದಾಖಲೆಗಳ ದೃಷ್ಟಿಯಿಂದ ಮೊದಲ 5 ಅಂಶಗಳ ಜ್ಞಾನಾತ್ಮಕ ವಲಯಕ್ಕೂ ಉಳಿದ 5ನ್ನು ಭಾವನಾತ್ಮಕ ಹಾಗೂ ಮನೋದೈಹಿಕ ವಲಯದ ನಿರ್ಧರಣೆಗೂ ನಿಗದಿಪಡಿಸಿಕೊಳ್ಳಲಾಗಿದೆ. (ಈ ಎರಡೂ ವಲಯಗಳನ್ನು ಬೇರ್ಪಡಿಸಿ ಮೌಲ್ಯಮಾಪನ ಮಾಡುವುದು ಸೂಕ್ತವಲ್ಲವಾದರೂ ದಾಖಲೆಗಳ ದೃಷ್ಟಿಯಿಂದ ನಿರ್ವಹಣೆಗಾಗಿ ಹೀಗೆ ಮಾಡಲಾಗಿದೆ). ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಚಟುವಟಿಕೆಗಳನ್ನು ಆಯೋಜಿಸಿದಾಗ ಮಗುವಿನ ಕಾರ್ಯಕ್ಷಮತೆಯನ್ನು ಆದರಿಸಿ ನೇರವಾಗಿ ಶ್ರೇಣಿಯನ್ನು ನೀಡಬಹುದು. ಆದರೆ ಈ ವಿಶೇಷ ಕಾರ್ಯಕ್ಷಮತೆಯನ್ನು ದಾಖಲಿಸಲು ಈ ಸಾಂದರ್ಭಿಕ ದಾಖಲೆ (Anecdotal Record) ಕೂಡಾ ಉತ್ತಮ ಸಾಧನವಾಗಬಹುದು.

| | |
|---|---|
| ಜ್ಞಾನಾತ್ಮಕ ವಲಯ | – ಐದು ಅಂಕಿಯ ಸಂಖ್ಯೆಗಳನ್ನು ಓದುವುದು ಹಾಗೂ ಬರೆಯುವುದು.<br>– ಐದು ಅಂಕಿಯ ಸಂಖ್ಯೆಗಳಲ್ಲಿನ ಅಂಕಿಯ ಸ್ಥಾನಬೆಲೆಯನ್ನು ಗುರುತಿಸುವುದು.<br>– ಸ್ಥಾನ ಬೆಲೆಯ ಆಧಾರದ ಮೇಲೆ ಐದು ಅಂಕಿಯ ಸಂಖ್ಯೆಗಳನ್ನು ವಿಸ್ತಾರ ರೂಪದಲ್ಲಿ ಬರೆಯುವುದು ಮತ್ತು ವಿಸ್ತಾರ ರೂಪದಿಂದ ಸಂಖ್ಯಾ ರೂಪವನ್ನು ಬರೆಯುವುದು.<br>– ಐದು ಅಂಕಿಯ ಸಂಖ್ಯೆಗಳನ್ನು ಏರಿಕೆ ಹಾಗೂ ಇಳಿಕೆ ಕ್ರಮದಲ್ಲಿ ಬರೆಯುವುದು.<br>– ಕೊಟ್ಟಿರುವ ಐದು ಅಂಕಿಯ ಸಂಖ್ಯೆಗಳಿಗೆ, ಸಮಾನ ಅಂತರವಿರುವ ಸಂಖ್ಯೆಗಳನ್ನು ಬರೆಯುವುದು. |
| ಭಾವನಾತ್ಮಕ ವಲಯ | – ಐದು ಅಂಕಿಯ ಸಂಖ್ಯೆಗಳ ಅಂಕೆಗಳಲ್ಲಿನ ವಿವಿಧ ವಿನ್ಯಾಸಗಳನ್ನು ರಚಿಸುವ ಆಸಕ್ತಿ ತೋರಿಸುವರು.<br>– ಸಂಖ್ಯೆಗಳ ರಚನೆಯಲ್ಲಿನ ಅಂಕೆಗಳ ವಿಶೇಷತೆಯನ್ನು ಮೆಚ್ಚುವರು. |

ಅಧ್ಯಾಯದ ಕಲಿಕೆಯಲ್ಲಿ ಮಕ್ಕಳು ತಮ್ಮನ್ನು ತೊಡಗಿಸಿಕೊಳ್ಳುವ ಪ್ರಕ್ರಿಯೆಯೊಂದಿಗೆಯೇ ಮೌಲ್ಯಮಾಪನ ಪ್ರಾರಂಭವಾಗುತ್ತದೆ. ಜ್ಞಾನ ವಲಯ ಮತ್ತು ಜ್ಞಾನೇತರ ವಲಯಗಳ ನಿರ್ದಿಷ್ಟಗಳನ್ನು / ಸೂಚಕಗಳನ್ನು ಒಟ್ಟಾಗಿಯೇ ಮೌಲ್ಯಮಾಪನ ಮಾಡೋಣ. ಆದರೆ ದಾಖಲಿಸುವಾಗ ಬೇರೆ ಬೇರೆಯಾಗಿ ದಾಖಲಿಸೋಣ.

| | |
|---|---|
| ಗಮನಿಸುವ ನಿರ್ದಿಷ್ಟ | – ಐದಂಕಿ ಸಂಖ್ಯೆಯ ಪರಿಕಲ್ಪನೆ.<br>– ಸಂಖ್ಯೆಗಳ ರಚನೆಯಲ್ಲಿನ ಅಂಕೆಗಳ ವಿಶೇಷತೆಯನ್ನು ಮೆಚ್ಚುವರು. |
| ಚಟುವಟಿಕೆ | ಐದು ಅಂಕೆಯ ಸಂಖ್ಯೆಗಳಲ್ಲಿನ ಅಂಕೆಗಳ ಮೊತ್ತ 20 ಬರುವಂತೆ ಸಂಖ್ಯೆಗಳ ರಚನೆ.<br>(ಪ್ರಾರಂಭದಲ್ಲಿ ಮಕ್ಕಳಿಗಿರುವ ನಾಲ್ಕಂಕಿ ಸಂಖ್ಯೆಯ ಪರಿಕಲ್ಪನೆಯನ್ನು ಅವುರ ಸ್ಮರಿಸುವುದರೊಂದಿಗೆ ಈ ಚಟುವಟಿಕೆಯಲ್ಲಿ ತಾವೇ ಆಯ್ಕೆ ಮಾಡಿಕೊಳ್ಳುವಂತೆ ಪ್ರೇರೇಪಿಸೋಣ) |
| ಚಟುವಟಿಕೆಯ ವಿಧ | ಗುಂಪು ಚಟುವಟಿಕೆ : ಐದು ಮಕ್ಕಳ ಒಂದೊಂದು ಗುಂಪು ಮಾಡುವುದು ಮತ್ತು ಪ್ರತಿ ಗುಂಪು ಮೇಲಿನ ವಿಶೇಷತೆ ಇರುವ 5 ಸಂಖ್ಯೆ ರಚಿಸುವುದು. (ತರಗತಿಯ ಒಟ್ಟು ಸಂಖ್ಯೆಗೆ ಅನುಸಾರವಾಗಿ ಗುಂಪಿನ ಗಾತ್ರವನ್ನು ಶಿಕ್ಷಕರೇ ನಿರ್ಧರಿಸುವುದು). |
| ಸಾಧನ ಮತ್ತು ತಂತ್ರ | ತಾಳೆಪಟ್ಟಿ ಹಾಗೂ ಅವಲೋಕನ |
| ಹಿಮ್ಮಾಹಿತಿ | ಮಕ್ಕಳು ತಾವು ಮಾಡಿರುವ ತಪ್ಪನ್ನು ಅರ್ಥೈಸಿಕೊಳ್ಳುವಂತೆ ಶಿಕ್ಷಕರಾದ ನಾವು ಕೆಲವು ಉದಾಹರಣೆಗಳನ್ನು ನೀಡುವುದರೊಂದಿಗೆ ಅನುಕೂಲಿಸೋಣ.<br>(ಉದಾಹರಣೆ : 23465 –> 2+3+4+6+5 = 20) |
| ಅನುಪಾಲನಾ ಚಟುವಟಿಕೆ | ಬಿಡಿ, ಹತ್ತು ಹಾಗೂ ಸಾವಿರ ಸ್ಥಾನದಲ್ಲಿ ಬೆಸಸಂಖ್ಯೆ ಬರುವಂತೆ ಐದು ಅಂಕೆಯ ಸಂಖ್ಯೆಗಳನ್ನು ರಚಿಸಿ. |

| **ತಾಳೆಪಟ್ಟಿ :** | |
|---|---|
| 1. ಸೊನ್ನೆ ಹತ್ತು ಸಾವಿರ ಸ್ಥಾನದಲ್ಲಿ ಬಂದಾಗ ಐದಂಕಿ ಸಂಖ್ಯೆಯಾಗುವುದಿಲ್ಲ ಎಂಬ ಪರಿಕಲ್ಪನೆ ಬಂದಿದೆಯೇ? | ಹೌದು/ಇಲ್ಲ |
| 2. ಐದಂಕಿ ಸಂಖ್ಯೆಗಳನ್ನು ಓದಲು ಬರುತ್ತದೆಯೇ? | ಹೌದು/ಇಲ್ಲ |
| 3. ಐದಂಕಿ ಸಂಖ್ಯೆಗಳ ಸ್ಥಾನ ಮತ್ತು ಸ್ಥಾನಬೆಲೆ ತಿಳಿದಿದೆಯೇ? | ಹೌದು/ಇಲ್ಲ |
| 4. ಸಂಖ್ಯೆಗಳನ್ನು ವಿಸ್ತರಣಾ ರೂಪದಲ್ಲಿ ವ್ಯಕ್ತಪಡಿಸಲು ಬರುತ್ತದೆಯೇ? | ಹೌದು/ಇಲ್ಲ |
| 5. ಸಂಖ್ಯೆಗಳ ಏರಿಕೆ – ಇಳಿಕೆ ಕ್ರಮ ತಿಳಿದಿದೆಯೇ? | ಹೌದು/ಇಲ್ಲ |
| 6. ಗುಂಪಿನಲ್ಲಿ ಭಾಗವಹಿಸುವಿಕೆ ಇತ್ತೇ? | ಹೌದು/ಇಲ್ಲ |
| 7. ಗುಂಪಿನಲ್ಲಿ ಒಬ್ಬರಿಗೊಬ್ಬರು ಸಹಕರಿಸಿದರೇ? | ಹೌದು/ಇಲ್ಲ |
| 8. ವಿನ್ಯಾಸಕ್ಕನುಗುಣವಾಗಿ ಸಂಖ್ಯೆಗಳ ರಚನೆಯ ಕೌಶಲವಿದೆಯೇ? | ಹೌದು/ಇಲ್ಲ |
| 9. ಸಂಖ್ಯೆಗಳಲ್ಲಿನ ಅಂಕಿಗಳ ಹೊಸ ಹೊಸ ವಿನ್ಯಾಸವನ್ನು ರಚಿಸಲು ಆಸಕ್ತರಾದರೇ? | ಹೌದು/ಇಲ್ಲ |
| 10. ಕಾರ್ಯ ಸಾಧನೆಯಲ್ಲಿ ವಿಶೇಷತೆಯನ್ನು ಪ್ರದರ್ಶಿಸಿದರೇ? | ಹೌದು/ಇಲ್ಲ |

**ಸೂಚನೆ :** ಪ್ರತಿ ವಿದ್ಯಾರ್ಥಿ ಎಷ್ಟು ಹೌದುಗಳನ್ನು ಪಡೆದಿದ್ದಾನೆ/ಳೆ ಎಂಬುದನ್ನು ಆಧರಿಸಿ ಅಂಶಗಳನ್ನು ನೀಡೋಣ. 0 ಯಿಂದ 4 ಅಂಶಗಳನ್ನು ಪಡೆದಿರುವ ಮಕ್ಕಳಿಗೆ ಯಾವ ನಿರ್ದಿಷ್ಟದಲ್ಲಿ ಹಿಂದುಳಿಯುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ನಂತರ ಅವಶ್ಯ ಮಾಹಿತಿ ನೀಡಿ ಅನುಪಾಲನಾ ಚಟುವಟಿಕೆಯನ್ನು ನೀಡೋಣ.

ಘಟಕ :– 2 ಮತ್ತು 3 ಸಂಕಲನ ಮತ್ತು ವ್ಯವಕಲನ ತರಗತಿ: 5

## ಘಟಕಾಧಾರಿತ ಸಾಮರ್ಥ್ಯಗಳು / ನಿರ್ದಿಷ್ಟಗಳು

| | |
|---|---|
| ಜ್ಞಾನಾತ್ಮಕ | – ಕೊಟ್ಟಿರುವ 5 ಅಂಕೆಯ ಸಂಖ್ಯೆಯನ್ನು ಇನ್ನೊಂದು 5 ಅಂಕೆಯ ಸಂಖ್ಯೆಯೊಂದಿಗೆ ದಶಕವಿಲ್ಲದೆ ಸಂಕಲನ ಮತ್ತು ವ್ಯವಕಲನ ಮಾಡುವುದು.<br>– ಕೊಟ್ಟಿರುವ 5 ಅಂಕೆಯ ಸಂಖ್ಯೆಯನ್ನು ಇನ್ನೊಂದು 5 ಅಂಕೆಯ ಸಂಖ್ಯೆಯೊಂದಿಗೆ ದಶಕ ಸಹಿತ ಸಂಕಲನ ಮತ್ತು ವ್ಯವಕಲನ ಮಾಡುವುದು.<br>– ವಾಕ್ಯರೂಪದ ಸಮಸ್ಯೆಗಳನ್ನು ಬಿಡಿಸುವುದು. |
| ತೊಡಗಿಸಿಕೊಳ್ಳುವಿಕೆ | –ಮಾನಸಿಕವಾಗಿ ಸಂಕಲನ ಮತ್ತು ವ್ಯವಕಲನ ಮಾಡುವರು.<br>–ದಿನ ನಿತ್ಯದ ಚಟುವಟಿಕೆಗಳಲ್ಲಿ ಸಂಕಲನ ಮತ್ತು ವ್ಯವಕಲನ ಹಾಸುಹೊಕ್ಕಾಗಿದೆ ಎಂದು ಪ್ರಶಂಶಿಸುವರು. |

**ಚಟುವಟಿಕೆ**

| | |
|---|---|
| ಗಮನಿಸುವ ನಿರ್ದಿಷ್ಟ | –ಸಂಕಲನ ಮತ್ತು ವ್ಯವಕಲನದ ಪರಿಕಲ್ಪನೆ.<br>–ಮಾನಸಿಕವಾಗಿ ಸಂಕಲನ ಮತ್ತು ವ್ಯವಕಲನ ಮಾಡುವರು.<br>–ದಿನ ನಿತ್ಯದ ಚಟುವಟಿಕೆಗಳಲ್ಲಿ ಸಂಕಲನ ಮತ್ತು ವ್ಯವಕಲನ ಹಾಸುಹೊಕ್ಕಾಗಿದೆ ಎಂದು ಪ್ರಶಂಶಿಸುವರು. |
| ಚಟುವಟಿಕೆ | ಮಕ್ಕಳಿಂದ ಕಾರ್ಡ್‌ಗಳ ತಯಾರಿಕೆ. (ಸ್ವಯಂಪ್ರೇರಿತ ಚಟುವಟಿಕೆ) |
| ಚಟುವಟಿಕೆಯ ವಿಧ | ಗುಂಪು ಚಟುವಟಿಕೆ : ಐದು ಮಕ್ಕಳ ಒಂದೊಂದು ಗುಂಪು ಮಾಡುವುದು ಮತ್ತುಪ್ರತಿ ಗುಂಪು ಹತ್ತು ಸಾವಿರ, ಸಾವಿರ, ನೂರು, ಹತ್ತು, ಬಿಡಿಗಳ ಕಾರ್ಡ್‌ಗಳನ್ನು ತಯಾರಿಸುವುದು ಮತ್ತು ಅವುಗಳನ್ನು ಸಂಕಲನ ಹಾಗೂ ವ್ಯವಕಲನಕ್ಕೆ ಬಳಸಿಕೊಳ್ಳುವುದು. ( ತರಗತಿಯ ಒಟ್ಟು ಸಂಖ್ಯೆಗೆ ಅನುಸಾರವಾಗಿ ಗುಂಪಿನ ಗಾತ್ರವನ್ನು ಶಿಕ್ಷಕರೇ ನಿರ್ಧರಿಸುವುದು)<br>ಉದಾ :<br> |
| ಸಾಧನ ಮತ್ತು ತಂತ್ರ | ಸ್ವಯಂಪ್ರೇರಿತ ಚಟುವಟಿಕೆ ಮತ್ತು ತಾಳೆಪಟ್ಟಿ* |

| | |
|---|---|
| ಹಿಮ್ಮಾಹಿತಿ | ಕಾರ್ಡ್‌ಗಳನ್ನು ತಯಾರಿಸುವಾಗ ಮತ್ತು ಬಳಸುವಾಗ ವಿದ್ಯಾರ್ಥಿಗಳಿಗೆ ಅನುಕೂಲಿಸೋಣ. ನೋಟ್‌ಮಸ್ತಕಗಳಲ್ಲಿ ಸಂಕಲನ ಅಥವಾ ವ್ಯವಕಲನ ಮಾಡುವ ಮೊದಲು ಕಾರ್ಡ್‌ಗಳನ್ನು ಬಳಸಿ ಮಾಡಿದಾಗ ಸ್ಥಾನ ಬೆಲೆಗನುಗುಣವಾಗಿ ಸಂಕಲನ / ವ್ಯವಕಲನ ಮಾಡುವುದು ಸುಲಭ ಎಂದು ಮಕ್ಕಳು ಅಭಿಪ್ರಾಯ ಪಡುವಂತೆ ಮಾಡೋಣ. |
| ಅನುಪಾಲನಾ ಚಟುವಟಿಕೆ | ಮಾನಸಿಕವಾಗಿ ಸಂಕಲನ ಮತ್ತು ವ್ಯವಕಲನ ಮಾಡುವ ಕೆಲವು ಮೌಖಿಕ ಸಮಸ್ಯೆಗಳನ್ನು ನೀಡೋಣ. |

**ತಾಳೆಪಟ್ಟಿ :**

| | |
|---|---|
| 1. ಪ್ರತಿಯೊಬ್ಬರಿಗೂ ಕೊಟ್ಟಿರುವ ಸಂಖ್ಯೆಯನ್ನು ಕಾರ್ಡ್‌ಗಳ ರೂಪದಲ್ಲಿ ವಿಸ್ತರಿಸಿ ಜೋಡಿಸಲು ಬರುತ್ತದೆಯೇ? | ಹೌದು/ಇಲ್ಲ |
| 2. ಸ್ಥಾನಬೆಲೆಗೆ ಅನುಗುಣವಾಗಿ ಕಾರ್ಡ್‌ಗಳ ಬಳಕೆ ತಿಳಿದಿದೆಯೇ? | ಹೌದು/ಇಲ್ಲ |
| 3. ಸಂಕಲನ ಮತ್ತು ವ್ಯವಕಲನ ಮಾಡುವಾಗ ಕಾರ್ಡ್‌ಗಳ ಬಳಕೆ ತಿಳಿದಿದೆಯೇ? | ಹೌದು/ಇಲ್ಲ |
| 4. ದಿನನಿತ್ಯದ ವ್ಯವಹಾರದಲ್ಲಿ ಸಂಕಲನ ಮತ್ತು ವ್ಯವಕಲನದ ಬಳಕೆಯನ್ನು ಗಮನಿಸಿದ್ದಾರೆಯೇ? | ಹೌದು/ಇಲ್ಲ |
| 5. ಗುಂಪಿನಲ್ಲಿ ಎಲ್ಲರೂ ಸೂಚಿಸಿರುವ ಕಾರ್ಡ್‌ಗಳನ್ನು ತಯಾರಿಸಿದ್ದಾರೆಯೇ? | ಹೌದು/ಇಲ್ಲ |
| 6. ಮಾನಸಿಕವಾಗಿ ಸಂಕಲನ ಮತ್ತು ವ್ಯವಕಲನ ಮಾಡುವ ಕೌಶಲ ತಿಳಿದಿದೆಯೇ? | ಹೌದು/ಇಲ್ಲ |
| 7. ತಯಾರಿಕೆಯಲ್ಲಿ ವೈವಿಧ್ಯತೆ ಇದೆಯೇ? | ಹೌದು/ಇಲ್ಲ |
| 8. ತಾನು ತಯಾರಿಸುತ್ತಿರುವ ಕಾರ್ಡ್ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಅರ್ಥೈಸುತ್ತದೆ ಎಂಬ ಮೆಚ್ಚುಗೆ ಇದೆಯೇ? | ಹೌದು/ಇಲ್ಲ |
| 9. ಸಂಕಲನ / ವ್ಯವಕಲನ ಮಾಡುವಾಗ ಸೂಕ್ತ ವಿಧಾನವನ್ನು ಆರಿಸಿಕೊಳ್ಳುತ್ತಿದ್ದಾನೆಯೇ? | ಹೌದು/ಇಲ್ಲ |
| 10. ತನ್ನ ಕಾರ್ಯದಲ್ಲಿ ಸೌಂದರ್ಯೋಪಾಸನೆಯನ್ನು ಪ್ರದರ್ಶಿಸುತ್ತಿದ್ದಾನೆಯೇ? | ಹೌದು/ಇಲ್ಲ |

**ಸೂಚನೆ :** ಪ್ರತಿ ವಿದ್ಯಾರ್ಥಿ ಎಷ್ಟು ಹೌದುಗಳನ್ನು ಪಡೆದಿದ್ದಾನೆ ಎಂಬುದನ್ನು ಆಧರಿಸಿ ಅಂಶಗಳನ್ನು ನೀಡೋಣ. 0 ಯಿಂದ 4 ಅಂಶಗಳನ್ನು ಪಡೆದಿರುವ ಮಕ್ಕಳಿಗೆ ಯಾವ ನಿರ್ದಿಷ್ಟದಲ್ಲಿ ಹಿಂದುಳಿಯುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ನಂತರ ಅವಶ್ಯ ಮಾಹಿತಿ ನೀಡಿ ಅನುಪಾಲನಾ ಚಟುವಟಿಕೆಯನ್ನು ನೀಡೋಣ.

ಘಟಕ :– 11 ಕೋನಗಳು ತರಗತಿ: 5

## ಘಟಕಾಧಾರಿತ ಸಾಮರ್ಥ್ಯಗಳು / ನಿರ್ದಿಷ್ಟಗಳು

| | |
|---|---|
| ಜ್ಞಾನಾತ್ಮಕ ವಲಯ | –ಕೋನಗಳ ಅರ್ಥವನ್ನು ವಿವರಿಸುವರು.<br>–ಸುತ್ತಮುತ್ತಲಿನ ಪರಿಸರದಲ್ಲಿ ಕೋನಗಳು ಉಂಟಾಗುವ ಸನ್ನಿವೇಶಗಳನ್ನು ಮತ್ತು ವಸ್ತುಗಳನ್ನು ಪತ್ತೆ ಹಚ್ಚುವುದು.<br>–ವಿವಿಧ ಕೋನಗಳನ್ನು ಹೆಸರಿಸಿ, ಅಳೆಯುವುದು. |
| ಭಾವನಾತ್ಮಕ ವಲಯ ಮತ್ತು ಮನೋದೈಹಿಕ ವಲಯ | –ಕೋನಗಳ ವಿಧಗಳನ್ನು ತೋರಿಸುವ ವಿವಿಧ ಮಾದರಿಗಳನ್ನು ತಯಾರಿಸುವರು<br>–ಜ್ಯಾಮಿತಿ ಪೆಟ್ಟಿಗೆಯಲ್ಲಿರುವ ಉಪಕರಣಗಳನ್ನು ಗುರುತಿಸಿ, ಬಳಸುವ ಕೌಶಲ ಪ್ರದರ್ಶಿಸುವರು |

**ಚಟುವಟಿಕೆ**

| | |
|---|---|
| ಗಮನಿಸುವ ನಿರ್ದಿಷ್ಟ | –ಕೋನಗಳ ವಿಧಗಳನ್ನು ತೋರಿಸುವ ವಿವಿಧ ಮಾದರಿಗಳನ್ನು ಆಸಕ್ತಿಯಿಂದ ತಯಾರಿಸುವರು<br>–ಕೋನಮಾಪಕ ಮತ್ತು ಅಳತೆಪಟ್ಟಿಯನ್ನು ಬಳಸುವ ಕೌಶಲ ಪ್ರದರ್ಶಿಸುವರು.<br>–ಗುಂಪಿನಲ್ಲಿ ಕಾರ್ಯ ನಿರ್ವಹಿಸುವ ಸಾಮಾಜಿಕ ಕೌಶಲಗಳನ್ನು ಹೊಂದಿರುವರು. |
| ಚಟುವಟಿಕೆ | ಕೋನಗಳ ವಿಧಗಳ ಮಾದರಿ ತಯಾರಿಕೆ |
| ಚಟುವಟಿಕೆಯ ವಿಧ | ಗುಂಪು ಚಟುವಟಿಕೆ : ಐದು ಮಕ್ಕಳ ಒಂದೊಂದು ಗುಂಪುಮಾಡುವುದು ಮತ್ತು ಪ್ರತಿ ಗುಂಪು ಕೋನಗಳ ವಿಧಗಳ ಬೇರೆ ಬೇರೆ ಮಾದರಿಗಳನ್ನು ತಯಾರಿಸಲು ಸೂಚಿಸುವುದು. |
| ಸಾಧನ ಮತ್ತು ತಂತ್ರ | ಮಾದರಿ ತಯಾರಿಕೆ ಮತ್ತು ದರ್ಜಾಮಾಪನಿ ಹಾಗೂ ಪ್ರಶ್ನೆಗಳು |
| ಹಿಮ್ಮಾಹಿತಿ | ಮಕ್ಕಳಿಗೆ ನಾವಿನ್ಯಯುತ ಮಾದರಿಗಳನ್ನು ತಯಾರಿಸಲು ಸೂಕ್ತ ಮಾರ್ಗದರ್ಶನ ನೀಡುವುದು. |
| ಅನುಪಾಲನಾ ಚಟುವಟಿಕೆ | ಗಣಿತ ಪ್ರಯೋಗಾಲಯದಲ್ಲಿರುವ ಕಾಗದ ಮಡಿಚುವಿಕೆಯಿಂದ ಉಂಟಾಗುವ ಕೋನದ ಮಾದರಿಗಳನ್ನು ನೀಡಿ ಅವುಗಳನ್ನು ಅಳೆದು ವಿಧಗಳನ್ನು ಹೆಸರಿಸಲು ತಿಳಿಸುವುದು. |

ಈ ಘಟಕದಲ್ಲಿ ಜ್ಞಾನವಲಯ ಮತ್ತು ಜ್ಞಾನೇತರ ವಲಯವನ್ನು ಮೌಲ್ಯಮಾಪನ ಮಾಡಲು ಒಂದಕ್ಕಿಂದ ಹೆಚ್ಚು ತಂತ್ರಗಳನ್ನು ಬಳಸಿರುವ ಉದಾಹರಣೆಯನ್ನು ನೀಡಿದೆ. ಆದರೆ ಒಂದೇ ತಂತ್ರದಿಂದ ಎರಡೂ ಆಯಾಮಗಳನ್ನು ನಿರ್ಧರಿಸಬಹುದೆಂದು ನಿಮಗೆ ತಿಳಿದಿದೆ. ಮಕ್ಕಳು ಮಾದರಿಗಳನ್ನು ತಯಾರಿಸುತ್ತಾ ಕಲಿಕೆಯಲ್ಲಿ ತೊಡಗಿರುವಾಗ ನಾವು ಈ ಪ್ರಶ್ನೆಗಳನ್ನು ಮತ್ತು ದರ್ಜಾಮಾಪನಿಯನ್ನು ಬಳಸೋಣ.

**ಪ್ರಶ್ನೆಗಳು :**

1.ಚಿತ್ರದಲ್ಲಿರುವ ಒಟ್ಟು ಕೋನಗಳನ್ನು ಗುರುತಿಸಿ.



2.ಈ ಕೋನದ ಶೃಂಗ ಬಿಂದು ಮತ್ತು ಬಾಹುಗಳನ್ನು ಹೆಸರಿಸಿ.




3.ಗಡಿಯಾರದ ಮುಳ್ಳುಗಳ ನಡುವೆ ಉಂಟಾದ ಕೋನದ ವಿಧವನ್ನು ಹೆಸರಿಸಿ.




4. ಆಯತದಲ್ಲಿ ಉಂಟಾಗಿರುವ ಕೋನಗಳು ಯಾವ ವಿಧಕ್ಕೆ ಉದಾಹರಣೆ ?

5. ಸರಳ ಕೋನದ ಅಳತೆ ...............................................

ಸೂಚನೆ : ಪ್ರತಿ ಪ್ರಶ್ನೆಗೆ ಒಂದು ಅಂಶದಂತೆ ಒಟ್ಟು 5 ಅಂಶಗಳಿಗೆ ಜ್ಞಾನಾತ್ಮಕ ವಲಯದ ನಿರ್ದಿಷ್ಟಗಳನ್ನು ಮಾಪಿಸೋಣ.

ಉಳಿದ 5 ಅಂಶಗಳಿಗೆ ಭಾವನಾತ್ಮಕ ವಲಯದ ನಿರ್ದಿಷ್ಟಗಳನ್ನು ದರ್ಜಾಮಾಪನಿ ಬಳಸಿ ಮಾಪಿಸೋಣ.

* ದರ್ಜಾಮಾಪನಿ :

| | |
|---|---|
| 1.ಮಾದರಿ ತಯಾರಿಕೆಯಲ್ಲಿ ಜೊತೆಗಾರರ ಆಲೋಚನೆಗಳನ್ನು ಮೆಚ್ಚುವ ಮನೋಭಾವನೆ ಇದೆ. | ಕೆಲವೊಮ್ಮೆ/ಯಾವಾಗಲೂ ಯಾವಾಗಲೂ ಇಲ್ಲ |
| 2.ತಯಾರಿಸಿದ ಮಾದರಿಗಳು ಸೃಜನಶೀಲತೆಯನ್ನು ಪ್ರತಿಬಿಂಬಿಸುತ್ತವೆಯೇ ? | ಕೆಲವೊಮ್ಮೆ/ಯಾವಾಗಲೂ ಯಾವಾಗಲೂ ಇಲ್ಲ |
| 3.ಪರಿಕಲ್ಪನೆಗಳನ್ನು ಸ್ಪಷ್ಟಪಡಿಸುವಂತಹ ಮಾದರಿಗಳ ತಯಾರಿಕೆಯಾಗುತ್ತಿದೆಯೇ ? | ಕೆಲವೊಮ್ಮೆ/ಯಾವಾಗಲೂ ಯಾವಾಗಲೂ ಇಲ್ಲ |
| 4.ತಯಾರಿಸಿದ ಮಾದರಿಗಳನ್ನು ಉತ್ತಮವಾಗಿ ಪ್ರದರ್ಶಿಸುತ್ತಿದ್ದಾರೆಯೇ ? | ಕೆಲವೊಮ್ಮೆ/ಯಾವಾಗಲೂ ಯಾವಾಗಲೂ ಇಲ್ಲ |
| 5.ಗುಂಪಿನಲ್ಲಿ ಮಾದರಿ ತಯಾರಿಸುವಾಗ ನಿಧಾನಗತಿಯಲ್ಲಿರುವವರೊಡನೆ ತಾಳ್ಮೆಯಿಂದ ವರ್ತಿಸುವರೇ? | ಕೆಲವೊಮ್ಮೆ/ಯಾವಾಗಲೂ ಯಾವಾಗಲೂ ಇಲ್ಲ |

| ಸೂಚನೆ : | ವಿವರಣೆ | ನೀಡಬೇಕಾದ ಅಂಶಗಳು |
|---|---|---|
| | ಯಾವಾಗಲೂ | 2 |
| | ಕೆಲವೊಮ್ಮೆ | 1 |
| | ಯಾವಾಗಲೂ ಇಲ್ಲ | 0 |

**ಸೂಚನೆ :** ಪ್ರತಿ ವಿದ್ಯಾರ್ಥಿ ಎಷ್ಟು ಹೌದುಗಳನ್ನು ಪಡೆದಿದ್ದಾನೆ ಎಂಬುದನ್ನು ಆಧರಿಸಿ ಅಂಶಗಳನ್ನು ನೀಡೋಣ. 0 ಯಿಂದ 4 ಅಂಶಗಳನ್ನು ಪಡೆದಿರುವ ಮಕ್ಕಳಿಗೆ ಯಾವ ನಿರ್ದಿಷ್ಟದಲ್ಲಿ ಹಿಂದುಳಿಯುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ನಂತರ ಅವಶ್ಯ ಹಿಮ್ಮಾಹಿತಿ ನೀಡಿ ಅನುಪಾಲನಾ ಚಟುವಟಿಕೆಯನ್ನು ನೀಡೋಣ.

ಮೇಲಿನ ಉದಾಹರಣೆಗಳಲ್ಲಿ ತಿಳಿಸಿರುವ ಸಾಧನ – ತಂತ್ರಗಳಷ್ಟೆ ಅಲ್ಲದೇ ಯಾವುದು ಸಮಂಜಸವೆನಿಸುತ್ತದೆಯೋ ಅದನ್ನು ಬಳಸಿರಿ. ಹಲವು ಸಂದರ್ಭಗಳಲ್ಲಿ ನೇರ ವೀಕ್ಷಣೆಯಿಂದಲೂ ಶ್ರೇಣಿ ನೀಡುವ ಸಾಧ್ಯ–ಸಾಧ್ಯತೆಗಳಿವೆ. ಅಷ್ಟೇ ಅಲ್ಲದೆ ಪ್ರತಿ ಅಧ್ಯಾಯಕ್ಕೆ ಸಂಬಂಧಿಸಿದಂತೆ ಭಾವನಾತ್ಮಕ ಮತ್ತು ಮನೋದೈಹಿಕ ವಲಯದ ನಿರ್ದಿಷ್ಟಗಳನ್ನು ಗುರುತಿಸುವ ಸ್ವಾತಂತ್ರ್ಯ ನಿಮಗಿದೆ.

## ರೂಪಣಾತ್ಮಕ ಮೌಲ್ಯಮಾಪನದ ಕ್ರೂಢೀಕರಣ :

5 ನೇ ತರಗತಿಯ 3 ಅಧ್ಯಾಯಗಳಲ್ಲಿ ಪ್ರತಿಯೊಂದು ಮಗುವನ್ನು ರೂಪಣಾತ್ಮಕ ಮೌಲ್ಯಮಾಪನ ಮಾಡಿದ ನಾವು ಈ ಹಂತದಲ್ಲಿ ಮಗು ಯಾವ ಶ್ರೇಣಿಯಲ್ಲಿದೆ ಎಂದು ಪ್ರಗತಿ ವಹಿ ಮತ್ತು ಶಿಕ್ಷಕರ ನಿರ್ವಹಣಾ ವಹಿಯಲ್ಲಿ ನಮೂದಿಸಿ ಮಗು ಮತ್ತು ಪೋಷಕರ ಗಮನಕ್ಕೆ ತರುವುದು ಅತ್ಯಗತ್ಯ. ಈ ಶ್ರೇಣಿಯನ್ನು ಮೇಲೆ ನಡೆಸಿದ ಚಟುವಟಿಕೆಗಳಿಂದ ಬಂದ ಒಟ್ಟು ಅಂಶಗಳಿಂದ ಶೇಕಡಾ 10ನ್ನು ಆಧರಿಸಿ ನೀಡಬೇಕಾಗಿದೆ.

ಉದಾ : X ಎಂಬ ವಿದ್ಯಾರ್ಥಿ ಮೊದಲನೇ ಅಧ್ಯಾಯದ 5 ಅಂಶಗಳಲ್ಲಿ 3 ಅಂಶಗಳನ್ನು, ಎರಡನೇ ಅಧ್ಯಾಯದ ಮೊದಲ 5 ಅಂಶಗಳಲ್ಲಿ 4 ಅಂಶಗಳನ್ನು ಮತ್ತು 3ನೇ ಅಧ್ಯಾಯದ ಮೊದಲ 5 ಅಂಶಗಳಲ್ಲಿ 3 ಅಂಶಗಳನ್ನು ಪಡೆದಿದೆಯೆಂದಾದರೆ, ಆ ಮಗು ಜ್ಞಾನಾತ್ಮಕ ವಲಯದ ಒಟ್ಟು 15 ಅಂಶಗಳಲ್ಲಿ 10 ಅಂಶಗಳನ್ನು ಸಾಧಿಸಿದೆ ಎಂದರ್ಥ.

ಆ ಮಗು ಮೊದಲನೇ ಅಧ್ಯಾಯದ ನಂತರದ 5 ಅಂಶಗಳಲ್ಲಿ 2 ಅಂಶಗಳನ್ನು, ಎರಡನೇ ಅಧ್ಯಾಯದ ನಂತರದ 5 ಅಂಶಗಳಲ್ಲಿ 3 ಅಂಶಗಳನ್ನು ಮತ್ತು 3ನೇ ಅಧ್ಯಾಯದ ನಂತರದ 5 ಅಂಶಗಳಲ್ಲಿ 2 ಅಂಶಗಳನ್ನು ಪಡೆದಿದೆಯೆಂದಾದರೆ, ಆ ಮಗು ಮನೋದೈಹಿಕ ಮತ್ತು ಭಾವನಾತ್ಮಕ ವಲಯದ ಒಟ್ಟು 15 ಅಂಶಗಳಲ್ಲಿ 7 ಅಂಶಗಳನ್ನು ಸಾಧಿಸಿವೆ ಎಂದರ್ಥ.

ಮಗು ಗಳಿಸಿರುವ ಈ ಎರಡೂ ಅಂಶಗಳನ್ನು ಶಿಕ್ಷಕರು ತಮ್ಮ ನಿರ್ವಹಣಾ ವಹಿಯಲ್ಲಿ ದಾಖಲಿಸಿ ಪ್ರತಿ ವಲಯದ ಅಂಶವನ್ನು ಶೇಕಡಕ್ಕೆ ಪರಿವರ್ತಿಸಿ ಶ್ರೇಣೀಕರಿಸುವುದು ಹಾಗೂ ಈ ಎರಡೂ ವಲಯಗಳಲ್ಲಿ ಗಳಿಸಿದ ಸರಾಸರಿ ಶ್ರೇಣಿಯನ್ನು ಮಗುವಿನ ಪ್ರಗತಿಯ ವಹಿಯಲ್ಲಿ ರೂಪಣಾತ್ಮಕ ಮೌಲ್ಯಮಾಪನ–1ರ ಅಡಿಯಲ್ಲಿ ನಮೂದಿಸುವುದು.

## ಶೇಕಡಕ್ಕೆ ಪರಿವರ್ತನೆ ಮತ್ತು ಶ್ರೇಣಿ ನೀಡುವ ವಿಧಾನ :

| ಶೇಕಡಾ | ಶ್ರೇಣಿ ಅಂಶ | ಶ್ರೇಣಿ |
|---|---|---|
| 90 – 100 | 9 – 10 | A+ |
| 70 – 89 | 7 – 8.9 | A |
| 50 – 69 | 5 – 6.9 | B+ |
| 30 – 49 | 3 – 4.9 | B |
| < 30 | < 3 | C |

ಮೇಲಿನ ಉದಾಹರಣೆಯಲ್ಲಿ x ವಿದ್ಯಾರ್ಥಿಯು ಜ್ಞಾನಾತ್ಮಕ ವಲಯದಲ್ಲಿ 15 ಅಂಶಗಳಿಗೆ 10 ಅಂಶಗಳನ್ನು ಸಾಧಿಸಿದೆ. ಮನೋದೈಹಿಕ ಮತ್ತು ಭಾವನಾತ್ಮಕ ವಲಯದಲ್ಲಿ 15 ಅಂಶಗಳಿಗೆ 7 ಅಂಶಗಳನ್ನು ಸಾಧಿಸಿದೆ. ಅದನ್ನು ಶೇಕಡಕ್ಕೆ ಹೀಗೆ ಪರಿವರ್ತಿಸಬಹುದು.

10/5 x 100 = 66.66 = 67 — 67ರ ಶೇಕಡಾ 10 ಎಂದರೆ 6.7 — 6.7 ರ ಶ್ರೇಣಿ B+

7/15 x 100 = 46.66 = 47 — 47ರ ಶೇಕಡಾ 10 ಎಂದರೆ 4.7 — 4.7 ರ ಶ್ರೇಣಿ B

ಈ ಎರಡೂ ವಲಯಗಳ ಸರಾಸರಿ — 67 + 4.7 / 2 = 5.7 — 5.7ರ ಶ್ರೇಣಿ B+

ಶ್ರೇಣಿಯನ್ನು ನಿರ್ಧರಿಸಿದ ನಂತರ ಪ್ರಗತಿಯನ್ನು ವಿದ್ಯಾರ್ಥಿಯ ಪ್ರಗತಿವಹಿಯಲ್ಲಿ ನಮೂದಿಸುವುದು.

**ಸಂಕಲನಾತ್ಮಕ ಮೌಲ್ಯಮಾಪನ :**

ರೂಪಣಾತ್ಮಕ ಮೌಲ್ಯಮಾಪನ ಕೈಗೊಂಡ ನಾವು ಈಗ ಸಂಕಲನಾತ್ಮಕ ಮೌಲ್ಯಮಾಪನ ಕೈಗೊಳ್ಳುವ ಬಗ್ಗೆ ಅರಿಯೋಣ. ಶೈಕ್ಷಣಿಕ ವರ್ಷದಲ್ಲಿ ನಾಲ್ಕು ರೂಪಣಾತ್ಮಕ ಮೌಲ್ಯಮಾಪನ ಹಾಗೂ ಎರಡು ಸಂಕಲನಾತ್ಮಕ ಮೌಲ್ಯಮಾಪನವನ್ನು ಕೈಗೊಳ್ಳುತ್ತೇವೆ. ಪ್ರತಿಯೊಂದು ಸಂಕಲನಾತ್ಮಕ ಮೌಲ್ಯಮಾಪನಕ್ಕೆ 30 ಅಂಕಗಳನ್ನು ನಿಗದಿ ಪಡಿಸಿದ್ದು ಜ್ಞಾನಾತ್ಮಕ ವಲಯಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿದೆ. ಸಂಕಲನಾತ್ಮಕ ಮೌಲ್ಯಮಾಪನದಲ್ಲಿ ಒಟ್ಟು 30 ಅಂಕಗಳಲ್ಲಿ 10 ಅಂಕಗಳನ್ನು ಮೌಖಿಕ ಪರೀಕ್ಷೆಗೂ, ಲಿಖಿತ ಪರೀಕ್ಷೆಗೂ 20 ಅಂಕಗಳನ್ನು ನಿಗದಿಪಡಿಸಲಾಗಿದೆ.

**ಸಂಕಲನಾತ್ಮಕ ಮೌಲ್ಯಮಾಪನ ಕೈಗೊಳ್ಳಬೇಕಾದಾಗ ಗಮನಿಸಬೇಕಾದ ಅಂಶಗಳು :**

**ಮೌಖಿಕ ಪರೀಕ್ಷೆ (10 ಅಂಕಗಳು) :**

* ಮೌಖಿಕ ಪರೀಕ್ಷೆ ಕೈಗೊಳ್ಳುವ ಮುನ್ನ ಶಿಕ್ಷಕರು ನಿಗದಿಪಡಿಸಿರುವ ಅಧ್ಯಾಯಗಳ ಪ್ರಶ್ನಾಕೋಟಿಯನ್ನು ತಯಾರಿಸಿಟ್ಟುಕೊಂಡಿರಬೇಕು.
* ಕೇವಲ ಜ್ಞಾನದ ಪ್ರಶ್ನೆಗಳನ್ನಷ್ಟೇ ಕೇಳುವುದಲ್ಲ.
* ಪ್ರಶ್ನೆಗಳು ವಿದ್ಯಾರ್ಥಿಯು ಚಿಂತಿಸಿ, ವಿಮರ್ಶಿಸಿ ಉತ್ತರವನ್ನು ನೀಡುವಂತಿರಬೇಕು.
* ನಿರ್ದಿಷ್ಟ ಉತ್ತರವನ್ನು ನಿರೀಕ್ಷಿಸುವಂತಹ ಪ್ರಶ್ನೆಗಳಿರಬೇಕು.
* ಪ್ರತಿ ಮಗುವಿಗೆ ನಿರ್ದಿಷ್ಟ ಸಮಯವನ್ನು ನೀಡಬೇಕು.
* ಮಗು ಭಯರಹಿತ ವಾತಾವರಣದಲ್ಲಿ ಪರೀಕ್ಷೆಯೆಂಬ ಅಳುಕು ಇಲ್ಲದೆ ಭಾಗವಹಿಸುವಂತಿರಬೇಕು.

**ಲಿಖಿತ ಪರೀಕ್ಷೆ (20 ಅಂಕಗಳು) :**

ಇದು ಸಾಂಪ್ರದಾಯಿಕವಾಗಿ ನಾವೆಲ್ಲರೂ ಬಳಸುತ್ತಿರುವ, ನಮಗೆಲ್ಲಾ ತಿಳಿದಿರುವ ಪರೀಕ್ಷಾ ವಿಧಾನವಾಗಿದೆ. ಇಲ್ಲಿ ಪ್ರಶ್ನೆಗಳನ್ನು ನೀಡುವಾಗ ಮತ್ತು ಕೌಶಲ ಪ್ರಶ್ನೆಗಳಿಗೆ ಹೆಚ್ಚು ಒತ್ತು ನೀಡುವುದು. ಏಕ ರೀತಿಯ ಪ್ರಶ್ನೆಗಳ ಬದಲಾಗಿ ಬಹು ಆಯ್ಕೆ ಪ್ರಶ್ನೆಗಳು, ಬಿಟ್ಟ ಸ್ಥಳಗಳು, ಹೋಲಿಕೆ ಮಾಡಿ ಸಂಬಂಧ ಕಲ್ಪಿಸುವ ಪ್ರಶ್ನೆಗಳು, ಕಿರು ಉತ್ತರ ಪ್ರಶ್ನೆಗಳು, ವಿವರಣಾತ್ಮಕ ಪ್ರಶ್ನೆಗಳನ್ನು ನೀಡುವುದು.

**ಸಂಕಲನಾತ್ಮಕ ಮೌಲ್ಯಮಾಪನದಲ್ಲಿ ಪಡೆದ ಅಂಕಗಳ ಶ್ರೇಣೀಕರಣ :**

X ಎಂಬ ವಿದ್ಯಾರ್ಥಿ ಮೌಖಿಕ ಪರೀಕ್ಷೆಯಲ್ಲಿ 3/5, ತೆರೆದ ಪುಸ್ತಕ ಪರೀಕ್ಷೆಯಲ್ಲಿ 4/5 ಮತ್ತು ಪುಸ್ತಕ ರಹಿತ ಪರೀಕ್ಷೆಯಲ್ಲಿ 13/20 ಪಡೆದಿದ್ದಾನೆ, ಎಂದರೆ ಒಟ್ಟು 30 ಅಂಕಗಳಿಗೆ 20 ಅಂಕಗಳನ್ನು ಪಡೆದಿದ್ದಾನೆ.

| ಪಡೆದ ಅಂಕಗಳು | ಶೇಕಡಾ ಪರಿವರ್ತನೆ | ಶ್ರೇಣಿ |
|---|---|---|
| 20/30 | 20/30 x 100 = 66.666 = 67 | $B^+$ |

ರೂಪಣಾತ್ಮಕ ಮೌಲ್ಯಮಾಪನ ಮತ್ತು ಸಂಕಲನಾತ್ಮಕ ಮೌಲ್ಯಮಾಪನ ಕೈಗೊಳ್ಳುವ ವಿಧಾನವನ್ನು ಅರಿತ ನಾವು ಅವುಗಳಲ್ಲಿ ಪಡೆದ ಅಂಕ ಮತ್ತು ಶ್ರೇಣಿಯನ್ನು ದಾಖಲಿಸುವುದನ್ನು ಒಂದು ಉದಾಹರಣೆಯ ಮೂಲಕ ಅರಿಯೋಣ.

## ಶಿಕ್ಷಕರ ನಿರ್ವಹಣಾ ವಹಿ :

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | | ರೂಪಣಾತ್ಮಕ ಮೌಲ್ಯಮಾಪನ 1 | | | | | | | ರೂಪಣಾತ್ಮಕ ಮೌಲ್ಯಮಾಪನ 2 | | | | | | | ಸಂಕಲನಾತ್ಮಕ ಮೌಲ್ಯಮಾಪನ 1 | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | ಫ–1 | ಫ–2 | ಫ–3 | ಒಟ್ಟು | ಶೇಕಡಾ 10 | ಶ್ರೇಣಿ | ಸರಾಸರಿ ಶ್ರೇಣಿ | ಫ–1 | ಫ–2 | ಫ–3 | ಒಟ್ಟು | ಶೇಕಡಾ 10 | ಶ್ರೇಣಿ | ಸರಾಸರಿ ಶ್ರೇಣಿ | ಮೌಖಿಕ ಪರೀಕ್ಷೆ | ಲಿಖಿತ ಪರೀಕ್ಷೆ ತೆರೆದ ಪುಸ್ತಕ | ಲಿಖಿತ ಪರೀಕ್ಷೆ ಪುಸ್ತಕ ರಹಿತ | ಒಟ್ಟು | ಶೇಕಡಾ | ಶ್ರೇಣಿ |
| 1 | X | ಜ್ಞಾನಾತ್ಮಕ | 3 | 4 | 3 | 10 | 6.7 | B+ | B+ | | | | | | | | 3 | 4 | 13 | 20 | 67 | B+ |
| | | ಮನೋ ದೈಹಿಕ ಮತ್ತು ಭಾವನಾತ್ಮಕ | 2 | 3 | 2 | 7 | 4.7 | B | | | | | | | | | | | | | | |

# ಸಮಾಜ ವಿಜ್ಞಾನ

## 5. ಸಮಾಜ ವಿಜ್ಞಾನ ವಿಷಯದಡಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

ಶಿಕ್ಷಕ ಮಿತ್ರರೇ, ಸಮಾಜ ವಿಜ್ಞಾನ ಕಲಿಸುವಾಗ ಇಸವಿ, ಘಟನೆ, ವಂಶಾವಳಿ, ನಕ್ಷೆ ಎಷ್ಟೆಲ್ಲಾ ಅಂಶಗಳು ಕಣ್ಣ ಮುಂದೆ ಬಂದು ನಿಲ್ಲುತ್ತವೆ. ಸಮಾಜ ವಿಜ್ಞಾನವೆಂದರೆ ಇತಿಹಾಸ, ಭೂಗೋಳ, ಪೌರನೀತಿಯ ಮಾಹಿತಿಯನ್ನು ನೀಡುವುದಕ್ಕಾಗಿ ಕಲಿಸುತ್ತಿದ್ದೇವೆಯೇ? ಎಂಬ ಪ್ರಶ್ನೆ ನಮ್ಮೊಳಗೆ ಎಷ್ಟೋ ಬಾರಿ ಬಂದಿರಬಹುದು. ನಾವೇನು ಮಾಡಲು ಸಾಧ್ಯ? ಮಗುವಿಗೆ ಎಷ್ಟು ಮಾಹಿತಿ ತಿಳಿದಿದೆ ಎಂದು ಅಳೆಯುವ ಕೆಲಸವನ್ನು ಮೌಲ್ಯಮಾಪನ ವ್ಯವಸ್ಥೆ ಬಯಸುತ್ತಿದೆಯಲ್ಲ. ನಮ್ಮ ಸಮಾಜವು ಅಂಕಗಳ ಆಧಾರದಲ್ಲಿಯೇ ಮಕ್ಕಳ ಪ್ರಗತಿಯನ್ನು ನೋಡಲು ಬಯಸುತ್ತಿದೆಯಲ್ಲ ಎಂದು ನಮಗೆ ನಾವೇ ಸಮಾಧಾನಪಡಿಸಿಕೊಳ್ಳಬಹುದು. ಆದರೆ ಒಮ್ಮೆ ಯೋಚಿಸಿ. ಕೇವಲ ಅಂಕಗಳ ಹಣೆಪಟ್ಟಿ ನಮ್ಮ ಮಕ್ಕಳ ಭವಿಷ್ಯ ನಿರ್ಧಾರಕವೇ? ಅವರ ಜೀವನ ಅಂಕಗಳಲ್ಲ NCF–2005 ರಚನಾವಾದದ ತರಗತಿ ಮತ್ತು ರೂಪಣಾತ್ಮಕ ಮೌಲ್ಯಮಾಪನವನ್ನು ಅಳವಡಿಸಿಕೊಳ್ಳುವುದರ ಮಹತ್ವವನ್ನು, ಅವಶ್ಯಕತೆಯನ್ನು ಎತ್ತಿ ಹಿಡಿದಿದೆ. ಈ ಬದಲಾವಣೆಯ ನಿಟ್ಟಿನಲ್ಲಿ ನಾವು ಸಮಾಜ ವಿಜ್ಞಾನ ವಿಷಯವನ್ನು ಸಮಗ್ರವಾಗಿ ಅರಿಯುತ್ತಾ, ವಿಷಯವನ್ನು ಜ್ಞಾನಾತ್ಮಕ ಮತ್ತು ತೊಡಗಿಸಿಕೊಳ್ಳುವಿಕೆಯ ಭಾಗವಾಗಿ ಅರ್ಥೈಸಿಕೊಳ್ಳಬೇಕಾಗಿದೆ.

ಪ್ರತಿ ವಿಷಯದ ಕ್ಷೇತ್ರಗಳ ಉದ್ದೇಶಗಳನ್ನು ಜ್ಞಾನಾತ್ಮಕ ಮತ್ತು ತೊಡಗಿಸಿಕೊಳ್ಳುವಿಕೆಯ ಸ್ವರೂಪದಲ್ಲಿ ಹೇಗೆ ಗುರುತಿಸಬಹುದು ಎಂಬುದಕ್ಕೆ ಮಾದರಿಯಾಗಿ ಈ ಪಟ್ಟಿಯನ್ನು ನೀಡಿದೆ. ಕೌಶಲ, ಮೌಲ್ಯಗಳು, ಮನೋಧೋರಣೆ ಮತ್ತು ಆಸಕ್ತಿಯನ್ನು ತೊಡಗಿಸಿಕೊಳ್ಳುವಿಕೆಯನ್ನು ನೀಡಿದೆ. ಘಟಕದ ಉದ್ದೇಶಗಳನ್ನು ಜ್ಞಾನಾತ್ಮಕ ಮತ್ತು ತೊಡಗಿಸಿಕೊಳ್ಳುವಿಕೆಯಡಿಯಲ್ಲಿ ಗುರುತಿಸಿಕೊಳ್ಳುವುದು ಸೂಕ್ತ.

**ಇದರಿಂದ ಎಂಟನೇ ತರಗತಿಯ ಸಮಾಜ ವಿಜ್ಞಾನ ವಿಷಯದ ವಲಯವಾರು ಉದ್ದಿಷ್ಟ ಹಾಗೂ ನಿರ್ದಿಷ್ಟ (ಸಾಮರ್ಥ್ಯ)ಗಳ ಪಟ್ಟಿ.**

**ವಿಷಯ : ಸಮಾಜ ವಿಜ್ಞಾನ ಕ್ಷೇತ್ರ : ಇತಿಹಾಸ**

| ವಲಯಗಳು | ಉದ್ದಿಷ್ಟಗಳು | ಕಲಿಕಾ ಮಾನಕಗಳು (ನಿರ್ದಿಷ್ಟಗಳು) |
|---|---|---|
| ಜ್ಞಾನಾತ್ಮಕ – ಎ | ಜ್ಞಾನ ಮತ್ತು ಅರ್ಥೈಸಿಕೊಳ್ಳುವಿಕೆ | * ಇತಿಹಾಸದ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆಯುವರು.<br>* ಐತಿಹಾಸಿಕ ಘಟನೆಗಳ ಬಗ್ಗೆ ತಿಳುವಳಿಕೆ ಮೂಡಿಸಿಕೊಳ್ಳುವರು.<br>* ಕಾಲಘಟ್ಟದಲ್ಲಿ ಬೇರೆ ಬೇರೆ ರಾಜರ ವಂಶಾವಳಿಗಳ ಆಡಳಿತ ಕ್ರಮಗಳನ್ನು ಅರ್ಥಮಾಡಿಕೊಳ್ಳುವರು.<br>* ಭಾರತದ ಸ್ವಾತಂತ್ರ್ಯ ಸಂಗ್ರಾಮ ಮತ್ತು ನಂತರದ ಆಡಳಿತವನ್ನು ಕುರಿತು ಅರಿಯುವರು.<br>* ವಿಶ್ವದ ನೆಲೆಯಲ್ಲಿ ನಮ್ಮ ದೇಶ, ಧರ್ಮವನ್ನು ಅರ್ಥ ಮಾಡಿಕೊಳ್ಳುವರು. |

| | | |
|---|---|---|
| | ತಾರ್ಕಿಕ ಚಿಂತನೆ (ಅನ್ವಯ) | * ಹಿಂದಿನ ತಲೆಮಾರಿನವರ ಕೊಡುಗೆಗಳನ್ನು/ ಬದಲಾವಣೆಗಳನ್ನು ಉದಾಹರಣೆ, ಆಧಾರಗಳ ಮೂಲಕ ನಿರೂಪಿಸುವರು.<br>* ವ್ಯಕ್ತಿ ಮತ್ತು ಸಂಘಟನೆ (ರಾಜಕೀಯ)ಗಳ ಸಾಧನೆಗಳನ್ನು ವಿಶ್ಲೇಷಿಸುವರು.<br>* ಕಾರ್ಯಕಾರಣಗಳ ಸಂಬಂಧಗಳನ್ನು ನಿರೂಪಿಸುವರು.<br>* ಐತಿಹಾಸಿಕ ತತ್ವ ಮತ್ತು ಸಿದ್ಧಾಂತಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವರು. |
| ತೊಡಗಿಸಿಕೊಳ್ಳುವಿಕೆ –ಬಿ (ತೊಡಗಿಸಿಕೊಳ್ಳುವಿಕೆ ಎಂಬುದು ಕೌಶಲ, ಮೌಲ್ಯಗಳು, ಮನೋಧೋರಣೆ ಮತ್ತು ಆಸಕ್ತಿಯು ಒಳಗೊಂಡಿದೆ) | ಕೌಶಲ | * ವಿವಿಧ ರಾಜರ/ವಂಶಗಳ ಆಡಳಿತದ ವ್ಯಾಪ್ತಿಯನ್ನು ನಕಾಶೆಯಲ್ಲಿ ಗುರುತಿಸುವರು.<br>* ನಕ್ಷೆಯಲ್ಲಿ ನಿರ್ದಿಷ್ಟ ಐತಿಹಾಸಿಕ ಸ್ಥಳಗಳನ್ನು ಗುರುತಿಸುವರು.<br>* ನಕಾಶೆ ಪಟ್ಟಿ, ವೇಳಾಪಟ್ಟಿ, ಸಾಮ್ರಾಜ್ಯ ವಿಸ್ತಾರ ರಾಜಧಾನಿಗಳ ನಡುವಿನ ದೂರವನ್ನು ಓದುವರು.<br>* ದೇಶ, ರಾಜ್ಯದ ನಕಾಶೆ ರಚಿಸುವರು ಮತ್ತು ಸಾಮ್ರಾಜ್ಯದ ಗಡಿರೇಖೆ ಬರೆಯುವರು. |
| | ಮೌಲ್ಯಗಳು | * ಅಹಿಂಸೆ, ಶಾಂತಿ, ಸಮಾನತೆ, ಸತ್ಯಶೀಲತೆ ಇತ್ಯಾದಿ ಗುಣಗಳನ್ನು ರೂಢಿಸಿಕೊಳ್ಳುವರು.<br>* ನ್ಯಾಯಪರತೆ, ತಾಳ್ಮೆ, ನಾಯಕತ್ವ, ಇತ್ಯಾದಿ ಸಾಮಾಜಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುವರು.<br>* ರಾಷ್ಟ್ರೀಯ ಸ್ಮಾರಕಗಳನ್ನು ಸಂರಕ್ಷಿಸುವರು.<br>* ಮಹಾಪುರುಷರ ಆದರ್ಶಗಳನ್ನು ಮೆಚ್ಚುವರು ಮತ್ತು ಅನುಸರಿಸುವರು. |
| | ಮನೋಧೋರಣೆ | * ಇತರರ ಅಭಿಪ್ರಾಯ, ಜೀವನಶೈಲಿ, ಸಾಂಸ್ಕೃತಿಕ ಆಚರಣೆಗಳನ್ನು ಗೌರವಿಸುವರು.<br>* ಐಸಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸಬೇಕೆಂಬ ಮನೋಭಾವ ಬೆಳೆಸಿಕೊಳ್ಳುವರು.<br>* ಐತಿಹಾಸಿಕ ವಿಷಯಗಳನ್ನು ಓದಿ ಸಂತೋಷಿಸುವ ಅಭ್ಯಾಸ ಮಾಡುವರು.<br>* ಐತಿಹಾಸಿಕ ಪ್ರಸಿದ್ಧ ವ್ಯಕ್ತಿಗಳನ್ನು ತಮ್ಮ ಆದರ್ಶಗಳಾಗಿ ಸ್ವೀಕರಿಸುವರು. (ರೋಲ್ ಮಾಡೆಲ್) |
| | ಆಸಕ್ತಿ | * ಭಾರತದ ಪ್ರಸಿದ್ಧ ದೇವಾಲಯಗಳ ಚಿತ್ರ ಸಂಗ್ರಹಿಸಿ ಮಾಹಿತಿ ಮತ್ತು ಚಿತ್ರಕೋಶ ತಯಾರಿಸುವರು.<br>* ಪ್ರಸಿದ್ಧ ವ್ಯಕ್ತಿಗಳ ಪಾತ್ರಾಭಿನಯ ಮಾಡುವರು.<br>* ನಾಟಕ, ಚಿತ್ರಕಲೆ, ಹಾಡುಗಳ ಮೂಲಕ ಇತಿಹಾಸವನ್ನು ಬಿಂಬಿಸುವ ಪ್ರಯತ್ನ ಮಾಡುವರು. |

## ಕ್ಷೇತ್ರ : ರಾಜ್ಯಶಾಸ್ತ್ರ

| ವಲಯಗಳು | ಉದ್ದಿಷ್ಟಗಳು | ಕಲಿಕಾ ಮಾನಕಗಳು (ನಿರ್ದಿಷ್ಟಗಳು) |
|---|---|---|
| ಜ್ಞಾನಾತ್ಮಕ – ಎ | ಜ್ಞಾನ ಮತ್ತು ಅರ್ಥೈಸಿಕೊಳ್ಳುವಿಕೆ | * ರಾಜ್ಯಶಾಸ್ತ್ರದ ಪರಿಕಲ್ಪನೆ ಮತ್ತು ಅದರ ಪ್ರಾಮುಖ್ಯತೆಯನ್ನು ಅರಿಯುವರು.<br>* ಪೌರ ಮತ್ತು ಪೌರತ್ವದ ಅರ್ಥ ಮತ್ತು ವ್ಯತ್ಯಾಸ ತಿಳಿದು, ಪೌರತ್ವ ಪಡೆಯುವ ಮತ್ತು ಕಳೆದುಕೊಳ್ಳುವ ವಿಧಾನಗಳನ್ನು ಅರಿಯುವರು.<br>* ಪ್ರಜಾಪ್ರಭುತ್ವದ ಪರಿಕಲ್ಪನೆ, ವಿಧಗಳನ್ನು ಅರಿತು, ಈ ಮಾದರಿಯಿಂದಾಗುವ ಅನುಕೂಲತೆಗಳನ್ನು ವಿವರಿಸುವರು.<br>* ದೇಶದ ಅಭಿವೃದ್ಧಿಯಲ್ಲಿ ರಾಜಕೀಯ ಸಂಸ್ಥೆಗಳ ಕಾರ್ಯಗಳನ್ನು ಮತ್ತು ಧ್ಯೇಯೋದ್ದೇಶಗಳ್ನು ಅರಿಯುವರು.<br>* ವಿಶ್ವಸಂಸ್ಥೆ ಸ್ಥಾಪನೆಯ ಉದ್ದೇಶ, ಅಂಗ ಸಂಸ್ಥೆಗಳು ಮತ್ತು ಸಾಧನೆಗಳನ್ನು ಅರಿಯುವರು. |
| | ತಾರ್ಕಿಕ ಚಿಂತನೆ (ಅನ್ವಯ) | * ವಿಶ್ವದ ರಾಜಕೀಯ ಹಿನ್ನೆಲೆಯಲ್ಲಿ ನಮ್ಮ ದೇಶವನ್ನು ಅರ್ಥ ಮಾಡಿಕೊಳ್ಳುವರು.<br>* ನೆರೆಹೊರೆ ರಾಷ್ಟ್ರಗಳೊಂದಿಗೆ ನಮ್ಮ ದೇಶದ ಸಂಬಂಧವನ್ನು ಚರ್ಚಿಸುವರು.<br>* ವಿವಿಧ ಸ್ಥಳೀಯ ಸಂಸ್ಥೆಗಳ ಆಡಳಿತ, ಕರ್ತವ್ಯಗಳನ್ನು ತನ್ನ ಊರಿನ ಹಿನ್ನೆಲೆಯಲ್ಲಿ ವಿಶ್ಲೇಷಿಸುವರು.<br>* ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಹಿನ್ನೆಲೆಯಲ್ಲಿ ಮಾನವ ಹಕ್ಕುಗಳು ಮತ್ತು ಮಕ್ಕಳ ಹಕ್ಕುಗಳ ತುಲನಾತ್ಮಕ ಪಟ್ಟಿಯನ್ನು ವಿಶ್ಲೇಷಿಸುವರು. |
| ತೊಡಗಿಸಿಕೊಳ್ಳುವಿಕೆ – ಬಿ | ಕೌಶಲ | * ಶಾಲೆಯಲ್ಲಿ ತನ್ನ ಕರ್ತವ್ಯಗಳನ್ನು ಗುರುತಿಸಿ ಅನುಸರಿಸುವರು.<br>* ಅಣುಕು ಸಂಸತ್ (ಸಂಸತ್ ಕಲಾಪ), ಗ್ರಾಮ ಸಭೆ ನಡೆಸುವರು.<br>* ಚುನಾವಣಾ ಮಾದರಿಯನ್ನು ನಡೆಸುವರು.<br>* ಕೇಂದ್ರದಿಂದ ಗ್ರಾಮದವರೆಗಿನ ವಿವಿಧ ಆಡಳಿತ ಸಂಸ್ಥೆಗಳ ನಕ್ಷೆ ತಯಾರಿಸುವರು. |
| | ಮೌಲ್ಯಗಳು | * ಸರ್ವಧರ್ಮ ಸಮಭಾವ ಎಂಬ ತತ್ವ ಅರಿತು ನಿತ್ಯಜೀವನದಲ್ಲಿ ಈ ಮೌಲ್ಯವನ್ನು ರೂಢಿಸಿಕೊಳ್ಳುವರು.<br>* ಸಾರ್ವಜನಿಕ ಆಸ್ತಿಯನ್ನು ಸಂರಕ್ಷಿಸುವರು. |
| | ಮನೋಧೋರಣೆ | * ಸ್ವಾತಂತ್ರ್ಯ, ಸಮಾನತೆ, ಶಾಂತಿ, ರಾಷ್ಟ್ರಪ್ರೇಮ (ರಾಷ್ಟ್ರಭಕ್ತಿ)ದ ಗುಣಗಳನ್ನು ಬೆಳೆಸಿಕೊಳ್ಳುವರು.<br>* ಪ್ರಜಾಪ್ರಭುತ್ವ ಮಾದರಿಯಲ್ಲಿ ಭಾಗವಹಿಸುವರು.<br>* ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳುವರು. |
| | ಆಸಕ್ತಿ | * ರಾಷ್ಟ್ರಲಾಂಛನ, ರಾಷ್ಟ್ರಗೀತೆಗಳಿಗೆ ಗೌರವ ತೋರಿಸುವರು.<br>* ದಿನಪತ್ರಿಕೆಗಳಲ್ಲಿ ಬರುವ ರಾಜಕೀಯ ಚಟುವಟಿಕೆಗಳ ಮಾಹಿತಿ ಮತ್ತು ಚಿತ್ರಗಳನ್ನು ಸಂಗ್ರಹಿಸಿ ಅಭಿಪ್ರಾಯವನ್ನು ದಾಖಲಿಸುವರು.<br>* ಬೇರೆ ದೇಶಗಳ ರಾಜಕೀಯ ವ್ಯವಸ್ಥೆ (ವಿವಿಧ ಮಾದರಿ ಸರ್ಕಾರ)ಯ ಬಗ್ಗೆ ಚಿತ್ರ ಮತ್ತು ಮಾಹಿತಿ ಸಂಗ್ರಹಿಸುವರು.<br>* ನಾಯಕತ್ವವನ್ನು ಹೊಂದಿ, ಜವಾಬ್ದಾರಿ ನಿರ್ವಹಿಸಲು ಆಸಕ್ತಿ ತೋರುವರು.<br>* ತಮ್ಮ ಊರಿನ ಸಮೀಕ್ಷೆ ಕೈಗೊಂಡು ಸಮಸ್ಯೆಗಳು ಮತ್ತು ಸವಲತ್ತುಗಳ ಮಾಹಿತಿ ಸಂಗ್ರಹಿಸಿ ತಮ್ಮ ಅಭಿಪ್ರಾಯ ವ್ಯಕ್ತಿಪಡಿಸುವರು.<br>* ಶಾಲಾ ಸಂಸತ್ತು ರಚಿಸಿ ಭಾಗವಹಿಸುವರು. |

**ಕ್ಷೇತ್ರ : ಸಮಾಜಶಾಸ್ತ್ರ**

| ವಲಯಗಳು | ಉದ್ದಿಷ್ಟಗಳು | ಕಲಿಕಾ ಮಾನಕಗಳು (ನಿರ್ದಿಷ್ಟಗಳು) |
|---|---|---|
| ಜ್ಞಾನಾತ್ಮಕ – ಎ | ಜ್ಞಾನ ಮತ್ತು ಅರ್ಥೈಸಿಕೊಳ್ಳುವಿಕೆ | * ಮಾನವನು ಸಮಾಜಜೀವಿ ಎಂಬುದನ್ನು ಅರ್ಥ ಮಾಡಿಕೊಳ್ಳುವರು.<br>* ಸಂಸ್ಕೃತಿ ಬೆಳವಣಿಗೆಯ ಬಗ್ಗೆ ಅರಿಯುವರು.<br>* ವಿವಿಧ ಸಮಾಜ ಮತ್ತು ಸಮುದಾಯಗಳ ಗುಣಲಕ್ಷಣಗಳನ್ನು ಅರಿತು ವಿವಿಧ ಪ್ರಕಾರಗಳನ್ನು ಗುರ್ತಿಸುವರು.<br>* ಕುಟುಂಬ ಜೀವನದ ಮಹತ್ವವನ್ನು ಅರಿಯುವರು. |
| | ತಾರ್ಕಿಕ ಚಿಂತನೆ (ಅನ್ವಯ) | * ಸಾಂಸ್ಕೃತಿಕ ವಿವಿಧತೆ ಮತ್ತು ಆಚಾರ ವಿಚಾರಗಳ ಬಗ್ಗೆ ವಿಶ್ಲೇಷಿಸುವರು.<br>* ಗ್ರಾಮೀಣ ಮತ್ತು ನಗರ ಸಮುದಾಯದ ಸಮಸ್ಯೆಗಳು ಮತ್ತು ಪರಿಹಾರ ಕ್ರಮಗಳ ಬಗ್ಗೆ ಚರ್ಚಿಸುವರು. (ತನ್ನ ಕುಟುಂಬ/ನೆರೆಹೊರೆ/ಗ್ರಾಮದ ಸಮಸ್ಯೆಗಳನ್ನು ಗುರುತಿಸಿ ವಿಶ್ಲೇಷಿಸುವರು). |
| ತೊಡಗಿಸಿಕೊಳ್ಳುವಿಕೆ –ಬಿ | ಕೌಶಲ | * ಸಾಂಸ್ಕೃತಿಕ ವೈವಿಧ್ಯವನ್ನು ನೃತ್ಯ, ಹಾಡು, ನಾಟಕ, ವೇಷಭೂಷಣದ ಮೂಲಕ ಪ್ರದರ್ಶಿಸುವರು.<br>* ಸಾಮಾಜಿಕ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಸಮುದಾಯದಲ್ಲಿ ನಾಗರೀಕರ ಪಾತ್ರದ ಅರಿವನ್ನು ಮೂಡಿಸುವರು. (ಚಿತ್ರಕಲೆ, ಹಾಡು, ನೃತ್ಯ, ಅಭಿನಯ)ದ ಮೂಲಕ. |
| | ಮೌಲ್ಯಗಳು | * ಬಡವರಿಗೆ, ಅಸಹಾಯಕರಿಗೆ ಅನುಕಂಪ ತೋರುವರು, ನೆರವಾಗುವರು.<br>* ಸಾಂಸ್ಕೃತಿಕ ವೈವಿಧ್ಯತೆಯನ್ನು ಮೆಚ್ಚುವರು ಮತ್ತು ಗೌರವಿಸುವರು. |
| | ಮನೋಧೋರಣೆ | * ಪಾತ್ರ ಪ್ರಜ್ಞೆಯನ್ನು (ಸಮುದಾಯದಲ್ಲಿ, ಶಾಲೆಯಲ್ಲಿ, ಕುಟುಂಬದಲ್ಲಿ) ಬೆಳೆಸಿಕೊಳ್ಳುವರು. ಅದರಂತೆ ನಡೆದುಕೊಳ್ಳುವರು.<br>* ಸಮಾಜದಲ್ಲಿ ಎಲ್ಲರೂ ಪರಾವಲಂಬಿಗಳೆಂದು ಅರಿತು ಎಲ್ಲರೊಂದಿಗೆ ಗೌರವದಿಂದ ವರ್ತಿಸುವರು. |
| | ಆಸಕ್ತಿ | * ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವರು.<br>* ತಮ್ಮ ಸುತ್ತಮುತ್ತಲಿನವರ ವಿವಿಧ ವೃತ್ತಿಗಳು, ಅವರ ಜೀವನಶೈಲಿಯ ಬಗ್ಗೆ ಮಾಹಿತಿ ಪಡೆಯುವರು. |

**ಕ್ಷೇತ್ರ : ಭೂಗೋಳ**

| ವಲಯಗಳು | ಉದ್ದಿಷ್ಟಗಳು | ಕಲಿಕಾ ಮಾನಕಗಳು (ನಿರ್ದಿಷ್ಟಗಳು) |
|---|---|---|
| ಜ್ಞಾನಾತ್ಮಕ – ಎ | ಜ್ಞಾನ ಮತ್ತು ಅರ್ಥೈಸಿಕೊಳ್ಳುವಿಕೆ | * ಭೂಮಿಯು ಮಾನವರ ಬೇರೆ ಬೇರೆ ಜೀವನ ಶೈಲಿಯ ಆವಾಸ ಎಂಬುದನ್ನು ಅರಿಯುವರು.<br>* ಭೂಮಿಯ ಮೇಲೆ ಸಂಪನ್ಮೂಲಗಳ ಹಂಚಿಕೆ ಮತ್ತು ವಿವಿಧ |

| | | |
|---|---|---|
| | | ಪ್ರದೇಶಗಳ ಬೇರೆ ಬೇರೆ ಹಂತಗಳಲ್ಲಿನ ಬೆಳವಣಿಗೆಯನ್ನು ಗುರುತಿಸುವರು.<br>* ಪರಿಸರ ಜ್ಞಾನವನ್ನು ಪಡೆಯುವರು. |
| | ಅನ್ವಯ<br>(ತಾರ್ಕಿಕ ಚಿಂತನೆ) | * ಪರಿಸರ ನೈರ್ಮಲ್ಯಕ್ಕೆ ಕೈಗೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಸೂಕ್ತ ತೀಮಾನಗಳನ್ನು ಕೈಗೊಳ್ಳುವರು.<br>* ಭೂಗೋಳ ಅಧ್ಯಯನದಲ್ಲಿ ನಕ್ಷೆಗಳ ಮಹತ್ವವನ್ನು ಸೂಕ್ತ ಆಧಾರಗಳೊಂದಿಗೆ ನಿರೂಪಿಸುವರು.<br>* ಸಸ್ಯವರ್ಗ ಮತ್ತು ಜನಜೀವನದ ಮೇಲೆ ವಾಯುಗುಣದ ಪ್ರಭಾವವನ್ನು ವಿಶ್ಲೇಷಿಸುವರು. |
| ತೊಡಗಿಸಿಕೊಳ್ಳುವಿಕೆ – ಬಿ | ಕೌಶಲ | * ಸಾಗರಗಳು, ಭೂಖಂಡಗಳು, ಪ್ರಮುಖ ಅಕ್ಷಾಂಶ, ರೇಖಾಂಶಗಳನ್ನು ಗುರುತಿಸುವರು.<br>* ಭೂಗೋಳದ ಚಿತ್ರವನ್ನು ರಚಿಸಿ ವಿವಿಧ ವಲಯಗಳನ್ನು ಗುರ್ತಿಸುವರು.<br>* ಪ್ರಪಂಚದ ಪ್ರಮುಖ ನದಿಗಳು, ಪರ್ವತಗಳನ್ನು ಭೂಪಟದಲ್ಲಿ ಪತ್ತೆ ಹಚ್ಚುವರು.<br>* ಸಂಕೇತಗಳ ಮೂಲಕ ನಕ್ಷೆಯಲ್ಲಿ ಸಸ್ಯವರ್ಗ, ಪ್ರಾಣಿವರ್ಗ ಇತ್ಯಾದಿಗಳನ್ನು ಗುರುತಿಸುವರು.<br>* ಮಾದರಿಗಳನ್ನು ತಯಾರಿಸುವರು.<br>* ನಕಾಶೆ/ಭೂಪಟಗಳನ್ನು ಬಳಸಿ ವಿವರಿಸುವರು. |
| | ಮೌಲ್ಯಗಳು | * ಪರಿಸರ ಪ್ರೇಮವನ್ನು ಬೆಳೆಸಿಕೊಳ್ಳುವರು.<br>* ವಿಶ್ವಕುಟುಂಬ ಪರಿಕಲ್ಪನೆ ಬೆಳೆಸಿಕೊಳ್ಳುವರು. |
| | ಮನೋಧೋರಣೆ | * ಪರಿಸರ ಸಂರಕ್ಷಣೆಯಲ್ಲಿ ತನ್ನ ಪಾತ್ರವನ್ನು ಅರಿತು (ತನ್ನ ಜವಾಬ್ದಾರಿಯೂ ಇದೆ ಎಂಬುದನ್ನು) ಬೆಳೆಸಿಕೊಳ್ಳುವರು.<br>* ಜಗತ್ತಿನ ವಿವಿಧ ಭಾಗದ ಜನರ ಸಂಸ್ಕೃತಿಯನ್ನು ಗೌರವಿಸಬೇಕೆಂಬ ಭಾವನೆ ಜನಜೀವನ, ರೀತಿನೀತಿಗಳನ್ನು ಮೆಚ್ಚುವರು.<br>* ಭೂಮಿಯ ಮೇಲಿನ ಕೌತುಕಗಳನ್ನು ಅರಿಯಬೇಕೆಂಬ ಕುತೂಹಲ ಬೆಳೆಸಿಕೊಳ್ಳುವರು.<br>* ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವರು. |
| | ಆಸಕ್ತಿ | * ಭೂಗೋಳ ಶಾಸ್ತ್ರಕ್ಕೆ ಸಾಹಸಿಗಳೂ, ಪ್ರವಾಸಿಗರು, ವಿಜ್ಞಾನಿಗಳು ನೀಡಿದ ಕೊಡುಗೆಗಳನ್ನು ಗುರುತಿಸಿ ಪಟ್ಟಿ ಮಾಡುವರು.<br>* ಪರಿಸರ ಮಾಲಿನ್ಯ ಪರಿಣಾಮಗಳ ವಿವಿಧ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸುವರು.<br>* ವಿವಿಧ ಮಾದರಿ ಮಣ್ಣುಗಳು, ಶಿಲೆಗಳನ್ನು ಸಂಗ್ರಹಿಸುವರು.<br>* ಯಾವುದಾದರೊಂದು ಸಮಸ್ಯೆ ಆಯ್ಕೆ ಮಾಡಿಕೊಂಡು ಮಾಹಿತಿ ಸಂಗ್ರಹಿಸಿ ಅಂಕಿ ಅಂಶ ವಿಶ್ಲೇಷಿಸುವರು. (ಉದಾ : ಗ್ರಾಮದಲ್ಲಿನ ಕೊಳವೆ ಬಾವಿಗಳು ಬತ್ತಿ ಹೋಗಲು, ಬತ್ತದೇ ಇರಲು ಕಾರಣಗಳು)<br>* ಭೂಮಿಯ ರಕ್ಷಣೆಗೆ ಕಾರ್ಯಕ್ರಮಗಳನ್ನು ರೂಪಿಸುವರು. |

**ಕ್ಷೇತ್ರ : ಅರ್ಥಶಾಸ್ತ್ರ**

| ವಲಯಗಳು | ಉದ್ದಿಷ್ಟಗಳು | ಕಲಿಕಾ ಮಾನಕಗಳು (ನಿರ್ದಿಷ್ಟಗಳು) |
|---|---|---|
| ಜ್ಞಾನಾತ್ಮಕ – ಎ | ಜ್ಞಾನ ಮತ್ತು ಅರ್ಥೈಸಿಕೊಳ್ಳುವಿಕೆ | * ಅರ್ಥಶಾಸ್ತ್ರದ ಅಧ್ಯಯನದ ಮಹತ್ವವನ್ನು ಅರಿತು, ಅರ್ಥಶಾಸ್ತ್ರದ ಪರಿಕಲ್ಪನೆಯನ್ನು ವಿವರಿಸುವರು.<br>* ಆರ್ಥಿಕ ಚಟುವಟಿಕೆಯಲ್ಲಿ ತೊಡಗಿರುವ ವಿವಿಧ ಗುಂಪಿನ ವ್ಯಕ್ತಿಗಳ ಪಾತ್ರವನ್ನು ಅರಿಯುವರು.<br>* ನೈಸರ್ಗಿಕ ಸಂಪನ್ಮೂಲಗಳಿಗೂ ಆರ್ಥಿಕ ಚಟುವಟಿಕೆಗಳಿಗೂ ಮತ್ತು ಜನಜೀವನಕ್ಕೂ ಇರುವ ಸಂಬಂಧವನ್ನು ಅರಿಯುವರು.<br>* ಪಂಚವಾರ್ಷಿಕ ಯೋಜನೆಗಳ ಅರ್ಥ ಮತ್ತು ಮಹತ್ವ ಅರಿಯುವರು.<br>* ದೇಶದ ಅಭಿವೃದ್ಧಿಯಲ್ಲಿ ಜನಸಂಖ್ಯಾ ಪರಿವರ್ತನೆಯ ಪಾತ್ರವನ್ನು ತಿಳಿಯುವರು.<br>* ದೇಶದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಬಡತನಕ್ಕೆ ಕಾರಣಗಳನ್ನು ಕಂಡುಕೊಳ್ಳುವರು. |
| | ಅನ್ವಯ | * ಬಡತನ ನಿವಾರಣೆಗೆ ಕೈಗೊಂಡ ಆರ್ಥಿಕ ಯೋಜನೆಗಳನ್ನು ಅರಿಯುವರು.<br>* ಪಂಚವಾರ್ಷಿಕ ಯೋಜನೆಗಳ ಗುರಿ ಮತ್ತು ಸಾಧನೆಗಳ ಬಗ್ಗೆ ವಿಶ್ಲೇಷಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವರು.<br>* ಜನಸಂಖ್ಯಾ ಸ್ಫೋಟವು ದೇಶದ ಆರ್ಥಿಕ ಸ್ಥಿತಿಯ ಮೇಲೆ ಹೇಗೆ ಪ್ರಬಾವ ಬೀರುತ್ತದೆ ಎಂಬುದನ್ನು ಆಧಾರ ಸಹಿತ ಸಮರ್ಥಿಸುವರು/ಜನಸಂಖ್ಯಾ ಹೆಚ್ಚಳ ಮತ್ತು ಆರ್ಥಿಕ ಅಭಿವೃದ್ಧಿಯ ಮಧ್ಯೆ ಸಂಬಂಧ ಕಲ್ಪಿಸುವರು. |
| ತೊಡಗಿಸಿಕೊಳ್ಳುವಿಕೆ | ಕೌಶಲ | * ಜನಗಣತಿಯ ವಿವಿಧ ಅಂಕಿ ಅಂಶಗಳನ್ನು ಸಂಗ್ರಹಿಸಿ ವ್ಯತ್ಯಾಸಗಳನ್ನು ಕೋಷ್ಟಕ/ಚಾರ್ಟ್ ತಯಾರಿಸಿ ಪ್ರದರ್ಶಿಸುವರು.<br>* ರೇಖಾ ನಕ್ಷೆಯಲ್ಲಿ (ಬಾರೋಗ್ರಾಫ್) ಜನಸಂಖ್ಯೆ ಹೆಚ್ಚಳ, ಪಂಚವಾರ್ಷಿಕ ಯೋಜನೆಗಳ ಗಾತ್ರವನ್ನು ಸೂಚಿಸುವರು. |
| | ಮನೋಧೋರಣೆ | * ಬಡತನ ನಿರ್ಮೂಲನೆಗೆ ಶಿಕ್ಷಣವು ಸಹಕಾರಿ ಎಂಬುದನ್ನು ಅರಿತು ಶಿಕ್ಷಣದ ಬಗ್ಗೆ ಒಲವು ತೋರುವರು.<br>* ಪಂಚವಾರ್ಷಿಕ ಯೋಜನೆಗಳು (ಸರ್ಕಾರದ ವಿವಿಧ ಯೋಜನೆಗಳು) ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವರು.<br>* ವಿಶೇಷ ಅಗತ್ಯವುಳ್ಳವರು, ವೃದ್ಧರೊಂದಿಗೆ ಸಂವೇದನಾಶೀಲರಾಗಿ ವರ್ತಿಸುವರು. |
| | ಆಸಕ್ತಿ | * ವಿದ್ಯಾರ್ಥಿ ಸಹಕಾರಿ ಸಂಘವನ್ನು ಸ್ಥಾಪಿಸಿ ಕಾರ್ಯ ನಿರ್ವಹಿಸುವರು.<br>* ಗಣತಿ ಕಾರ್ಯ ಕೈಗೊಂಡು ಲಿಂಗಾನುಪಾತ, ಉದ್ಯೋಗದ ಮಾಹಿತಿ ಸಂಗ್ರಹಿಸುವರು.<br>* ತಮ್ಮ ಊರಿನ / ಸುತ್ತಮುತ್ತಲಿನವರ ಆರ್ಥಿಕ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆಯುವರು. |

## ಕ್ಷೇತ್ರ : ವ್ಯವಹಾರ ಅಧ್ಯಯನ

| ವಲಯಗಳು | ಉದ್ದಿಷ್ಟಗಳು | ಕಲಿಕಾ ಮಾನಕಗಳು (ನಿರ್ದಿಷ್ಟಗಳು) |
|---|---|---|
| ಜ್ಞಾನಾತ್ಮಕ – ಎ | ಜ್ಞಾನ ಮತ್ತು ಅರ್ಥೈಸಿಕೊಳ್ಳುವಿಕೆ | * ಆರ್ಥಿಕ ಬೆಳವಣಿಗೆಯಲ್ಲಿ ವ್ಯಾಪಾರ ಮತ್ತು ವಾಣಿಜ್ಯದ ಪಾತ್ರ ಮತ್ತು ಪ್ರಾಮುಖ್ಯತೆಯನ್ನು ಅರಿಯುವರು.<br>* ವ್ಯವಹಾರದ ಉದ್ದೇಶಗಳು, ವ್ಯವಹಾರದ ವಿಭಾಗಗಳನ್ನು ಅರಿಯುವರು.<br>* ವ್ಯವಹಾರದ ನೀತಿ ತತ್ವಗಳನ್ನು ಅರ್ಥೈಸಿಕೊಳ್ಳುವರು.<br>* ವ್ಯವಹಾರ ಸಂಘಟನೆಗಳ ವಿಧಗಳು ಮತ್ತು ಅವುಗಳ ಸ್ವರೂಪವನ್ನು ಅರಿಯುವರು.<br>* ದೊಡ್ಡ ಪ್ರಮಾಣದ ವ್ಯವಹಾರ ಸಂಸ್ಥೆಗಳನ್ನು ಗುರುತಿಸುವರು.<br>* ಗ್ರಾಹಕರ ಶಿಕ್ಷಣ ಮಹತ್ವವನ್ನು ವಿವರಿಸುವರು. |
| | ಅನ್ವಯ (ತಾರ್ಕಿಕ ಚಿಂತನೆ) | * ತನ್ನ ಕುಟುಂಬದ ವ್ಯವಹಾರವನ್ನು ಯಾರು ಮತ್ತು ಹೇಗೆ ನಿರ್ವಹಿಸುವರು? ಎಂಬುದನ್ನು ವಿಶ್ಲೇಷಿಸುವರು.<br>* ತಾನು ನೋಡಿದ ಚಿಲ್ಲರೆ ಮಾರಾಟಗಾರರ ವ್ಯಾಪಾರದ ಮಾಹಿತಿಯನ್ನು ಸಂಗ್ರಹಿಸುವರು.<br>* ಗೃಹಕೈಗಾರಿಕೆಗಳ ಸಮಸ್ಯೆಗಳನ್ನು ವಿಶ್ಲೇಷಿಸುವರು. |
| ತೊಡಗಿಸಿಕೊಳ್ಳುವಿಕೆ – ಬಿ | ಕೌಶಲ | * ಗೃಹಕೈಗಾರಿಕೆಯ ಮಾದರಿಯನ್ನು ತಯಾರಿಸುವರು.<br>* ವಿವಿಧ ತೂಕದ ಮತ್ತು ಅಳತೆಯ ಮಾದರಿಗಳನ್ನು ತಯಾರಿಸುವರು.<br>* ಜಾಹೀರಾತನ್ನು ಸಿದ್ಧಪಡಿಸುವರು. |
| | ಮೌಲ್ಯಗಳು | * ವೃತ್ತಿ ಧರ್ಮದ ಪಾಲನೆ ಮಾಡುವರು. |
| | ಮನೋಧೋರಣೆ | * ಗ್ರಾಹರಕ  ಸಂಘ ಸ್ಥಾಪಿಸಿ ಅದರಲ್ಲಿ ಪಾಲ್ಗೊಳ್ಳುವರು.<br>* ನಾಟಕ, ಪ್ರಹಸನಗಳ ಮೂಲಕ ಸಹಕಾರಿ ಸಂಘಗಳು, ವ್ಯಾಪಾರದ ಬಗ್ಗೆ ಗ್ರಾಹಕರ ವೇದಿಕೆ ಬಗ್ಗೆ ಜಾಗೃತಿ ಮೂಡಿಸುವರು.<br>* ವಿವಿಧ ರೀತಿಯ ಜಾಹೀರಾತುಗಳನ್ನು ಸಂಗ್ರಹಿಸುವವರು ತಾವೇ ಜಾಹಿರಾತುಗಳನ್ನು ರಚಿಸುವರು.<br>* ತಮ್ಮ ಊರಿನಲ್ಲಿ ಕಂಡುಬರುವ ಕುಶಲಕರ್ಮಿಗಳು, ಪಟ್ಟಿ ಮಾಡಿ ಒಬ್ಬರ ಕೆಲಸದ ಅನುಭವವನ್ನು ದಾಖಲಿಸುವರು. |

### ಸಮಾಜ ವಿಜ್ಞಾನ ತರಗತಿಯಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳು :

* ಬರವಣಿಗೆಯ ಸ್ವಪ್ರೇರಿತ ಕಾರ್ಯಗಳು (ಇಲ್ಲಿ ಯೋಜನಾ ಕಾರ್ಯವೆಂದಾಗಲೀ ಅಥವಾ ನಿಯೋಜಿತ ಕಾರ್ಯವೆಂದಾಗಲೀ ನಮೂದಿಸಿಲ್ಲ. ಶಿಕ್ಷಕರ ಕಾರ್ಯವು ಮಕ್ಕಳು ಸ್ವಯಂ ಪ್ರೇರಣೆಯಿಂದ ಒಂದು ಯೋಜನೆಯನ್ನು ಆಯ್ಕೆ ಮಾಡಿಕೊಳ್ಳುವಂತೆ ಅನುಕೂಲಿಸುವುದು ಮಾತ್ರ).
* ವೀಕ್ಷಣಾ ವರದಿಗಳು
* ಸ್ವ ಸರಳ ಯೋಜನೆಗಳು (ಗುಂಪು ಮತ್ತು ವೈಯಕ್ತಿಕ)
* ಮಂಡನೆಗಳು (ಗುಂಪು ಮತ್ತು ವೈಯಕ್ತಿಕ)
* ರಸಪ್ರಶ್ನೆ ಮತ್ತು ಬಹುಆಯ್ಕೆ ಪ್ರಶ್ನೆಗಳು
* ಮಾದರಿಗಳು ಮತ್ತು ಚಾರ್ಟ್‌ಗಳ ತಯಾರಿಕೆ / ವಿವರಣೆ
* ಚರ್ಚೆಗಳು
* ವಿಚಾರ ಸಂಕಿರಣಗಳು

* ಐತಿಹಾಸಿಕ ಚಿತ್ರಣಗಳ ಸಂಗ್ರಹ ಮತ್ತು ಮಹತ್ವದ ವಿಶ್ಲೇಷಣೆ
* ಪಾತ್ರಾಭಿನಯ
* ಐತಿಹಾಸಿಕ ಘಟನೆಗಳನ್ನೊಳಗೊಂಡ ನಾಟಕಗಳು
* ಕ್ಷೇತ್ರ ಅಧ್ಯಯನ
* ವಸ್ತು ಪ್ರದರ್ಶನ
* ಗ್ರಂಥಾಲಯ ಪುಸ್ತಕ ಅಧ್ಯಯನ
* ಪಠ್ಯಪುಸ್ತಕ ಮತ್ತು ಪಾಠ ಅವಲೋಕನ/ವಿಮರ್ಶಾ ಚಟುವಟಿಕೆ
* ಸಮಸ್ಯಾ ಪರಿಹಾರ ಚರ್ಚಾ ವಿಧಾನ
* ಮೂಲಾಧಾರ ವಿಧಾನ
* ಪ್ರವಾಸ/ಹೊರ ಸಂಚಾರ ವಿಧಾನ
* ಸಮೀಕ್ಷೆ/ಸಂದರ್ಶನ

## ಅಳವಡಿಸಿಕೊಳ್ಳಬಹುದಾದ ಸಾಧನಗಳು ಮತ್ತು ತಂತ್ರಗಳು

| ಸಾಧನಗಳು | ತಂತ್ರಗಳು |
|---|---|
| ಲಿಖಿತ ಪರೀಕ್ಷೆಗಳು<br>ಮೌಖಿಕ ಪರೀಕ್ಷೆಗಳು<br>ಘಟಕ, ಮಾಸಿಕ ಪರೀಕ್ಷೆಗಳು | ಪರೀಕ್ಷಣಾ |
| ಅವಲೋಕನ ಪಟ್ಟಿ (ಶಿಕ್ಷಕರ ಮತ್ತು ಮಕ್ಕಳ)<br>ಸಾಂದರ್ಭಿಕ ದಾಖಲೆ<br>ವ್ಯಕ್ತಿ ವೃತ್ತಾಂತ ದಾಖಲೆ<br>ತನಿಖಾ ಪಟ್ಟಿ<br>ದರ್ಜಾಮಾಪನಿ | ಅವಲೋಕನ |
| ಔಪಚಾರಿಕ ಮತ್ತು ಅನೌಪಚಾರಿಕ<br>ತಪಶೀಲು ಪಟ್ಟಿ | ಸಂದರ್ಶನ |
| ಕ್ಷೇತ್ರ ಅಧ್ಯಯನದ ನಿಯೋಜಿತ ಕಾರ್ಯ (ಪ್ರಾಜೆಕ್ಟ್) | ಯೋಜನಾ ಕಾರ್ಯ |

ಈ ಎಲ್ಲಾ ಸಾಧನ ತಂತ್ರಗಳನ್ನು ನಮ್ಮ ತರಗತಿಗಳ ಸನ್ನಿವೇಶ ಮತ್ತು ಚಟುವಟಿಕೆಗಳಿಗನುಗುಣವಾಗಿ ಬಳಸಿಕೊಳ್ಳಬಹುದು. ಮುಂದೆ ಉದಾಹರಣೆಯಾಗಿ ನೀಡಿರುವ ಘಟಕಗಳಲ್ಲಿ ಕೆಲವು ಸಾಧನ ತಂತ್ರಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಚರ್ಚಿಸಲಾಗಿದೆ.

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಪರಿಕಲ್ಪನೆಯನ್ನು ತಾವು ಈಗಾಗಲೇ ಅರ್ಥೈಸಿಕೊಂಡಿದ್ದೀರಿ. ಸಮಾಜ ವಿಜ್ಞಾನ ವಿಷಯದ ಶಿಕ್ಷಕರಾಗಿ ನಾವು ಕೆಲವು ಅಂಶಗಳನ್ನು ಮನದಟ್ಟು ಮಾಡಿಕೊಳ್ಳಬೇಕಾಗುತ್ತದೆ.

* ಸಮಾಜ ವಿಜ್ಞಾನ ವಿಷಯವನ್ನು ಕೇವಲ ಮಾಹಿತಿಯನ್ನು ನೀಡುವುದು, ಮೌಲ್ಯಮಾಪನದಲ್ಲಿ ಅವರು ಕಲಿತ ವಿಷಯಗಳ ಸ್ಮರಣೆಯನ್ನು ಒರೆಹಚ್ಚುವುದು ಎಂಬ ನಿಲುವನ್ನು ನಾವು ಬದಲಾಯಿಸಿಕೊಳ್ಳಬೇಕಿದೆ. ಸಮಾಜ ವಿಜ್ಞಾನ ವಿಷಯವೆಂಬುದು ಜ್ಞಾನ, ಕೌಶಲ, ಮೌಲ್ಯ, ಮನೋಭಾವ ಮತ್ತು ಆಸಕ್ತಿ ಮೂಡಿಸುವ ಸಮಗ್ರವಾದ ವಿಷಯವೆಂಬುದನ್ನು ಮರೆಯಬಾರದು.

* ಶಿಕ್ಷಕರಾಗಿ ಬೋಧಿಸುವುದೇ ನಮ್ಮ ಕರ್ತವ್ಯ (ನಾವು ಹೇಳುವವರು ಮಕ್ಕಳು ಕೇಳುವರು) ಎಂಬುದನ್ನು ಮಾರ್ಪಡಿಸಿಕೊಂಡು, ಮಕ್ಕಳು ತಾವೇ ಸ್ವತಃ ಜ್ಞಾನ ಸಂರಚಿಸಿಕೊಳ್ಳುವಂತೆ ಅವರಿಗೆ ಸೂಕ್ತವಾದ ಸನ್ನಿವೇಶ ಮತ್ತು ನೆರವನ್ನು ಅನುಕೂಲಿಸುವ ಪಾತ್ರ ನಮ್ಮದು ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕಾಗುತ್ತದೆ. ಜ್ಞಾನ ರಚನೆ ಮತ್ತು ಪುನಾರಚನೆಯ ಪ್ರಕ್ರಿಯೆಯಲ್ಲಿ ರೂಪಣಾತ್ಮಕ ಮಾಪನವು ಪ್ರಮುಖವಾದ ಪಾತ್ರ ವಹಿಸಲಿದ್ದು, ಇದರ ಅರ್ಥ ಮತ್ತು ಔಚಿತ್ಯವನ್ನು ಮನಗಾಣಬೇಕಿದೆ.

* ಮಕ್ಕಳ ಕಲಿಕೆಯ ಪ್ರಗತಿಯನ್ನು ಕೇವಲ ಕಿರುಪರೀಕ್ಷೆಗಳು ಮತ್ತು ಸೆಮಿಸ್ಟರ್/ವಾರ್ಷಿಕ ಪರೀಕ್ಷೆಗಳ ಮೂಲಕ ಮೌಲ್ಯಮಾಪನ ಮಾಡುವ ಪದ್ಧತಿಯಿಂದ ಮುಕ್ತರಾಗಿ ಪ್ರತಿ ಅವಧಿ, ಘಟಕಗಳಲ್ಲಿ ಕಲಿಕೆಯ ಜೊತೆಯಾಗಿ ನಿರಂತರವಾಗಿ ಮೌಲ್ಯಮಾಪನ, ಪರಿಹಾರ ಕ್ರಮಗಳು, ಮರುಮೌಲ್ಯಮಾಪನ ಮಾಡಬೇಕಾಗಿದೆ. ಅದೇ ಪ್ರಕಾರವಾಗಿ ಪ್ರತಿ ವಿದ್ಯಾರ್ಥಿಯು ಕಲಿಕೆಯಲ್ಲಿ ಮಾಡಿದ ಸಾಧನೆಯನ್ನು ಹಂತ ಹಂತವಾಗಿ ದಾಖಲಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾರಂಭದಲ್ಲಿ ರೂಪಣಾತ್ಮಕ ಮೌಲ್ಯಮಾಪನಕ್ಕಾಗಿ ನಾವು ಕೈಗೊಳ್ಳಬೇಕಾದ ಸಿದ್ದತೆಗಳು ಹೀಗಿವೆ.

* ರೂಪಣಾತ್ಮಕ ಮೌಲ್ಯಮಾಪನದ ಪ್ರಗತಿಯನ್ನು ಪ್ರಗತಿ ನೋಟದಲ್ಲಿ ದಾಖಲಿಸಬೇಕಾದ ಅವಧಿಯ ನಿರ್ಧಾರ.
  ಉದಾ : ಜುಲೈ ತಿಂಗಳ ಅಂತ್ಯಕ್ಕೆ ರೂಮೌ 1 ದಾಖಲಿಸುವುದು.

  ಸೆಪ್ಟೆಂಬರ್ 2ನೇ ವಾರದ ಅಂತ್ಯಕ್ಕೆ ರೂಮೌ 2 ದಾಖಲಿಸುವುದು.

* ಪರಿಗಣಿಸಬೇಕಾದ ಅಂಕ

  ಉದಾ : ರೂಮೌ 1 ಹಂತಕ್ಕೆ – 10 ಅಂಶ/ಅಂಕ

  ರೂಮೌ 2 ಹಂತಕ್ಕೆ – 10 ಅಂಶ/ಅಂಕ

* ರೂಮೌ 1 ಹಂತದ ಮೌಲ್ಯಮಾಪನಕ್ಕೆ ಒಳಪಡುವ ಘಟಕಗಳು/ಸಾಮರ್ಥ್ಯಗಳ ನಿರ್ಧಾರ

  ಉದಾ : ರೂಮೌ 1 ಹಂತಕ್ಕೆ 5ನೇ ತರಗತಿಯ ಸಮಾಜ ವಿಜ್ಞಾನದ ಮೌಲ್ಯಮಾಪನಕ್ಕೆ ಈ ಘಟಕಗಳನ್ನು ಒಳಪಡಿಸಬಹುದಾಗಿದೆ.

  ಘಟಕ – 1, ನಮ್ಮ ಸುತ್ತಮುತ್ತ

  ಘಟಕ – 2, ನಮ್ಮ ಅತ್ಯಂತ ಪ್ರಾಚೀನ ನಗರಗಳು

  ಘಟಕ – 5, ಕುಟುಂಬ, ಸಮುದಾಯ ಮತ್ತು ಸಮಾಜ

  ಘಟಕ – 9, ಭೂಮಿ – ನಮ್ಮ ಮಾತೃಗೃಹ

  (ಪಾಠಗಳ ಹಂಚಿಕೆಯನ್ನು ಅವಕಾಶ ಮತ್ತು ಅಗತ್ಯತೆಗೆ ಅನುಗುಣವಾಗಿ ಮಾಡಿಕೊಳ್ಳಬಹುದಾಗಿದ್ದು, ಉದಾಹರಣೆಯಾಗಿ ಇಲ್ಲಿ ಪಾಠ ಹಂಚಿಕೆ ನೀಡಿದೆ).

## ತರಗತಿ – 5
## ಘಟಕದ ಹೆಸರು – ನಮ್ಮ ಸುತ್ತಮುತ್ತ (ಬೆಂಗಳೂರು ವಿಭಾಗ)

| ಉದ್ದೇಶಗಳು | ಕಲಿಕಾ ನಿರ್ದಿಷ್ಟಗಳು |
|---|---|
| ಅರ್ಥೈಸಿಕೊಳ್ಳುವಿಕೆ<br>ಜ್ಞಾನಾತ್ಮಕ ಅಂಶ | * ತನ್ನ ವಿಭಾಗದ ಭೌಗೋಳಿಕ ಲಕ್ಷಣಗಳನ್ನು ಗುರ್ತಿಸುವರು.<br>* ಆಹಾರ, ಉಡುಪು ಮತ್ತು ಹವ್ಯಾಸಗಳು ಸ್ಥಳದಿಂದ ಸ್ಥಳಕ್ಕೆ ಹೇಗೆ ಬದಲಾಗುತ್ತವೆ ಎಂಬುದನ್ನು ಅರ್ಥೈಸಿಕೊಳ್ಳುವರು. |
| ತೊಡಗಿಸಿಕೊಳ್ಳುವಿಕೆ | * ತನ್ನ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳ ಪರಿಚಯ ಮಾಡಿಕೊಳ್ಳುವರು ಮತ್ತು ಭೂಪಟದಲ್ಲಿ ಅವುಗಳನ್ನು ಗುರುತಿಸುವ ಕೌಶಲವನ್ನು ಹೊಂದುವರು.<br>* ಸಮಾಜ ಸುಧಾರಣೆ, ಸಾಹಿತ್ಯ ಮತ್ತು ಲಲಿತ ಕಲೆಗಳಿಗೆ ಜನರು ನೀಡಿದ ಕೊಡುಗೆಗಳನ್ನು ಅರಿವು ಮೆಚ್ಚಿಕೊಳ್ಳುವರು. |

ಶಿಕ್ಷಕರು ಮಕ್ಕಳು ಸ್ವಯಂ ಪ್ರೇರಿತರಾಗಿ ಒಂದು ಯೋಜನಾ ಕಾರ್ಯ ಕೈಗೊಳ್ಳುವಂತೆ ಶಿಕ್ಷಕರು ಪ್ರೇರಣೆ ನೀಡಿ ಎಲ್ಲ ಹಂತಗಳಲ್ಲಿ ಸಹಾಯ ಮಾಡುವರು. ತರಗತಿಯಲ್ಲಿ ಮಕ್ಕಳು ತಮ್ಮ ಊರಿನ ಭೌಗೋಳಿಕ ಲಕ್ಷಣಗಳನ್ನು ಕುರಿತು ವಿಷಯ ಹಂಚಿಕೆ ಮಾಡಿಕೊಳ್ಳುವರು. ನಂತರ ಯೋಜನೆಯ ಕಾಲಾವಧಿಯನ್ನು ನಿರ್ಧರಿಸುವರು. ಮಕ್ಕಳು ತಮ್ಮ ಗುಂಪುಗಳನ್ನು ಮಾಡಿಕೊಳ್ಳುವರು.

**ಸ್ವಯಂ ಪ್ರೇರಿತ ಕಾರ್ಯ / ಯೋಜನಾ ಕಾರ್ಯ ಒಳಗೊಂಡಿರಬೇಕಾದ ಅಂಶಗಳು :**

1. ತಮ್ಮ ವಿಭಾಗದ ಭೌಗೋಳಿಕ ಲಕ್ಷಣಗಳ ವಿವರ.
2. ತನ್ನ ವಿಭಾಗದ ನಕ್ಷೆಯಲ್ಲಿ ತನ್ನ ಊರು ಮತ್ತು ವಿಭಾಗದ ಪ್ರೇಕ್ಷಣೀಯ ಸ್ಥಳಗಳನ್ನು ಗುರುತಿಸಿರುವ ನಕ್ಷೆ.
3. ಪ್ರೇಕ್ಷಣೀಯ ಸ್ಥಳಗಳ ಪಟ್ಟಿ. ಅವುಗಳ ಬಗ್ಗೆ ಕಿರುಪರಿಚಯ.
4. ತಮ್ಮ ವಿಭಾಗದ ಪ್ರಸಿದ್ಧ ವ್ಯಕ್ತಿಗಳ ಮತ್ತು ಅವರು ನೀಡಿದ ಕೊಡುಗೆಗಳ ಮಾಹಿತಿ ಸಂಗ್ರಹಣೆ.
   (ಸಂದರ್ಶನ/ಗ್ರಂಥಾಲಯ ಪುಸ್ತಕ/ಹಿರಿಯರಿಂದ ಮಾಹಿತಿ ಸಂಗ್ರಹಣೆ)
5. ಈ ವ್ಯಕ್ತಿಗಳಲ್ಲಿ ತಮಗಿಷ್ಟವಾದ ವ್ಯಕ್ತಿ, ಆಯ್ಕೆಗೆ ಕಾರಣ

1 ರಿಂದ 4 ಅಂಶಗಳಲ್ಲಿ ಪ್ರತಿಯೊಂದು ಅಂಶವನ್ನು ಗುಂಪಿನ ಒಬ್ಬೊಬ್ಬರು ಆಯ್ಕೆ ಮಾಡಿಕೊಂಡು ಮಾಹಿತಿ ಸಂಗ್ರಹಿಸುವಂತೆ ಉಳಿದವರು ಚಿತ್ರ ಸಂಗ್ರಹಿಸುವಂತೆ ಶಿಕ್ಷಕರು ಅನುಕೂಲಿಸುವರು. ಎಲ್ಲರೂ ಸೇರಿ ಯೋಜನೆಯನ್ನು ಸಿದ್ಧಪಡಿಸುವಾಗ 5ನೇ ಅಂಶಕ್ಕೆ ಪ್ರತಿಯೊಬ್ಬರೂ ಹೆಸರು ಬರೆದು ಅವರ ಇಷ್ಟವಾದ ಅಂಶಗಳ ವಿವರ ದಾಖಲಿಸುವರು. ಶಿಕ್ಷಕರು ಪ್ರತಿ ಹಂತದಲ್ಲೂ ಮಕ್ಕಳಿಗೆ ಸಲಹೆ, ಹಿಮ್ಮಾಹಿತಿ ನೀಡುವರು.

ನಿಗಧಿತ ಅವಧಿಯ ನಂತರ ಶಿಕ್ಷಕರು ಮಕ್ಕಳ ಯೋಜನಾ ಕಾರ್ಯವನ್ನು ಮತ್ತು ಮಕ್ಕಳ ವೈಯಕ್ತಿಕ ಮಾಹಿತಿ ಕಾರ್ಯದ ವಿವರಗಳನ್ನು ಸಂಗ್ರಹಿಸುವರು. ಮಕ್ಕಳು ವೈಯಕ್ತಿಕವಾಗಿ ಸಂಗ್ರಹಿಸಿದ ಮಾಹಿತಿ ಮತ್ತು ತಂಡದ ಯೋಜನಾ ಕಾರ್ಯವನ್ನು ಹೋಲಿಸಿ ತಾಳೆಪಟ್ಟಿಯಲ್ಲಿ ಪ್ರತಿ ಮಗುವಿನ ಕಾರ್ಯಗಳನ್ನು ಮೌಲ್ಯೀಕರಿಸುವರು.

| ಕ್ರ.ಸಂ. | ಜ್ಞಾನಾತ್ಮಕ ಅಂಶಗಳು – ಎ | ಹೌದು | ಇಲ್ಲ |
|---|---|---|---|
| 1 | ಕೊಟ್ಟಿರುವ ಯೋಜನೆಯ ವಿಷಯದ ಬಗ್ಗೆ ಮಗು ತಿಳಿದಿದೆಯೇ? | | |
| 2 | ಯೋಜನೆಯ ಪರಿಕಲ್ಪನೆ ಮಗುವಿಗೆ ಅರ್ಥವಾಗಿದೆಯೇ? | | |
| 3 | ಸಂಗ್ರಹಿಸಿದ ಅಂಶಗಳನ್ನು ಸಂಸ್ಕರಿಸಿ, ಕ್ರಮಬದ್ಧವಾಗಿ ಜೋಡಿಸಿದ್ದಾರೆಯೇ? | | |
| 4 | ವಿಷಯಕ್ಕೆ ಸಂಬಂಧಿಸಿದ ಚಿತ್ರಗಳು, ನಕ್ಷೆಗಳು ಸೂಕ್ತವಾಗಿದೆಯೇ? | | |
| 5 | ಯೋಜನೆಯ ಅಂಶಗಳು ನೈಜತೆಗೆ ಹತ್ತಿರವಾಗಿದೆಯೇ? | | |

| ಕ್ರ.ಸಂ. | ಜ್ಞಾನಾತ್ಮಕ ಅಂಶಗಳು – ಬಿ | ಹೌದು | ಇಲ್ಲ |
|---|---|---|---|
| 1 | ಗ್ರಂಥಾಲಯದ ಪುಸ್ತಕಗಳನ್ನು ಬಳಸಿದ್ದಾರೆಯೇ? | | |
| 2 | ಇತರೆ ಮೂಲಗಳಿಂದ (ಸಮುದಾಯ, ಸಂದರ್ಶನ.......) ಮಾಹಿತಿ ಪಡೆಯಲು ಸಂಪರ್ಕಿಸಿದ್ದಾರೆಯೇ? | | |
| 3 | ಮಗುವಿನಲ್ಲಿ ಮೆಚ್ಚುವ (ಪ್ರಶಂಸಿಸುವ) ಗುಣವಿದೆಯೇ? | | |
| 4 | ಯೋಜನೆ ತಯಾರಿಸುವಾಗ ಹೊಸ ರೀತಿಯ ಆಲೋಚನೆಗಳಿವೆಯೇ? (ಸೃಜನಶೀಲತೆ ವ್ಯಕ್ತವಾಗಿದೆಯೇ) | | |
| 5 | ಕೆಲಸ ಪೂರ್ಣಗೊಳಿಸಲು ಇತರರೊಂದಿಗೆ ಸಹಕರಿಸಿದ್ದಾರೆಯೇ? | | |

* ತಾಳೆ ಪಟ್ಟಿಯ ನೆರವಿನಿಂದ ಶಿಕ್ಷಕರು ಪ್ರತಿ ಮಗುವಿನ ವೈಯಕ್ತಿಕ ದಾಖಲೆ ಮತ್ತು ಗುಂಪಿನ ಯೋಜನೆಯನ್ನು ಹೋಲಿಸಿ ಮಕ್ಕಳ ವೈಯಕ್ತಿಕ ಅಂಶಗಳನ್ನು ನಿರ್ಧರಿಸುವರು.

**ಗಮನಿಸಿ :**

* ದಾಖಲೆಯ ದೃಷ್ಟಿಯಿಂದ ಜ್ಞಾನಾತ್ಮಕ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಪ್ರತ್ಯೇಕವಾಗಿ ಪರಿಗಣಿಸಬೇಕಾಗುತ್ತದೆ.
* ಮಗುವಿಗೆ ಎಷ್ಟು ಹೌದುಗಳು ಸಿಕ್ಕಿವೆ ಎಂಬ ಆಧಾರದಲ್ಲಿ ಅಷ್ಟು ಅಂಕಗಳು ಆ ವಿದ್ಯಾರ್ಥಿಗೆ ದೊರೆತಿವೆ ಎಂಬುದಾಗಿ ದಾಖಲಿಸಬಹುದು.

  ಉದಾ : ಒಂದು ವಿದ್ಯಾರ್ಥಿ 5 ಅಂಶಗಳಿಗೆ 4 ಹೌದುಗಳನ್ನು ಪಡೆದಿದ್ದರೆ, ಆ ಮಗುವಿನ ಅಂಕಗಳು 4 ಎಂದು ಅರ್ಥ.
* ಅಂಕಗಳನ್ನು ಗ್ರೇಡ್‌ಗೆ ಪರಿವರ್ತಿಸಿ ವೈಯಕ್ತಿಕ ತಃಖ್ತೆಯಲ್ಲಿ ನಮೂದಿಸಲು ಈ ಕೆಳಕಂಡ ಶ್ರೇಣಿಗಳನ್ನು ಅನುಸರಿಸಬೇಕಾಗುತ್ತದೆ.

  5–A+

  4–A

  3–B+

  2–B

  1–C

## ಪುನರ್ಬಲನ ಚಟುವಟಿಕೆ :

* ಪರಿಕಲ್ಪನೆಯನ್ನು ಗ್ರಹಿಸದ ಮಕ್ಕಳನ್ನು ಪ್ರತ್ಯೇಕವಾಗಿ ಗುರ್ತಿಸಿ ಮತ್ತೊಮ್ಮೆ ಹಿಮ್ಮಾಹಿತಿಯನ್ನು ಶಿಕ್ಷಕರು ನೀಡುವರು.
* ಪರಿಕಲ್ಪನೆ, ಸಂಗ್ರಹಿಸಬೇಕಾದ ಮಾಹಿತಿಗಳು ಹಾಗೂ ಪೂರಕ ಸಾಹಿತ್ಯ ನೆರವು ನೀಡಿ, ಮಕ್ಕಳಿಗೆ ಒಂದು ಚಿಕ್ಕ ಯೋಜನೆಯನ್ನು ತಯಾರಿಸುವಂತೆ ಅನುಕೂಲಿಸುವರು.

  ಆ ನಂತರ ಮಕ್ಕಳ ಸಾಧನೆಯನ್ನು ಒರೆಹಚ್ಚಿ ಪಡೆದ ಅಂಕಗಳನ್ನು / ಗ್ರೇಡ್‌ಗಳನ್ನು ನಮೂದಿಸುವುದು.

**ಗಮನಿಸಿ :** ಪ್ರತಿ ವಿದ್ಯಾರ್ಥಿಗೂ ಒಂದೊಂದು ತಾಳೆಪಟ್ಟಿಯನ್ನು ಬಳಸುವುದು ಕಷ್ಟಸಾಧ್ಯವಾಗಿರುವುದರಿಂದ, ಈ ಸಾಮಾನ್ಯ ನಮೂನೆಯಲ್ಲಿ ಮಾಹಿತಿಯನ್ನು ದಾಖಲಿಸಬಹುದು.

| ಕ್ರ. ಸಂ | ವಿದ್ಯಾರ್ಥಿಯ ಹೆಸರು | ಸ್ವ ಪ್ರೇರಿತ ಕಾರ್ಯ (ಯೋಜನಾ ಕಾರ್ಯ) | | | | | | | | | | ? ? -1 | | | |
|---|---|---|---|---|---|---|---|---|---|---|---|---|---|---|---|
| | | ಜ್ಞಾನಾತ್ಮಕ | | | | | ತೊಡಗಿಸಿಕೊಳ್ಳುವಿಕೆ | | | | | A | | B | |
| | | 1 | 2 | 3 | 4 | 5 | 1 | 2 | 3 | 4 | 5 | ಒಟ್ಟು ಅಂಶ | ಗ್ರೇಡ್ | ಒಟ್ಟು ಅಂಶ | ಗ್ರೇಡ್ |
| | | | | | | | | | | | | | | | |
| | | | | | | | | | | | | | | | |
| | | | | | | | | | | | | | | | |

ಹೌದು ಎಂದಾದರೆ ಹೌದು ಎಂದು ನಮೂದಿಸಿ ಇಲ್ಲ ಎಂದಾದರೆ, ಚುಕ್ಕೆ ಇಟ್ಟು ಹಿಮ್ಮಾಹಿತಿ ನೀಡಿ. ಅವರಿಗೆ ಚಿಕ್ಕದಾದ ಯೋಜನಾ ಕಾರ್ಯ ನೀಡಿರಿ. ನಂತರ ಅವರ ಪ್ರಗತಿ ಪರಿಶೀಲಿಸಿ ಹೌದು/ಇಲ್ಲ ಬರೆಯಿರಿ.

**ಗಮನಿಸಿ :**

ಪ್ರತಿ ಘಟಕದಲ್ಲೂ ಪರಿಕಲ್ಪನೆಗೆ ಸಂಬಂಧಿಸಿದ ಬರವಣಿಗೆಯ ಅಭ್ಯಾಸಗಳನ್ನು ಮಾಡಿಸುವುದು. ಈ ಬರವಣಿಗೆಯ ಅಭ್ಯಾಸಗಳಿಗೆ ಯಾವುದೇ ಮೌಲ್ಯವನ್ನು ನಿರ್ಧರಿಸಿ ನಮೂದಿಸುವ ಅಗತ್ಯವಿರುವುದಿಲ್ಲ. ಸಂಕಲನಾತ್ಮಕ ಮೌಲ್ಯಮಾಪನ ಮಾಡುವಾಗ ಈ ರೀತಿಯ ಸಿದ್ಧತೆ ಅವಶ್ಯಕವಾಗಿರುತ್ತದೆ.

**ಅನುಸರಿಸಿ :**

* ಪ್ರತಿ ಚಟುವಟಿಕೆಯಲ್ಲಿ ವಿದ್ಯಾರ್ಥಿ ಬರೆದ ಮಾಹಿತಿಗಳು, ಸ್ವಮೌಲ್ಯಮಾಪನ ಕಾರ್ಡ್‌ಗಳು, ಲಿಖಿತ ರೂಪದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು, ಬಿಡಿಸಿದ ನಕ್ಷೆಗಳು ಇತ್ಯಾದಿಗಳನ್ನು ಶಿಕ್ಷಕರು ಮೌಲ್ಯಮಾಪನಗೊಳಿಸಿ ಶ್ರೇಣೀಕರಣಕ್ಕೆ ಅಂಶಗಳನ್ನು ಪರಿಗಣಿಸಿದ ನಂತರ ಸಂಬಂಧಿಸಿದ ಮಕ್ಕಳ ಫೈಲ್‌ಗಳಲ್ಲಿ ಸಂಗ್ರಹಿಸಿ ಇದೇ ಮಕ್ಕಳ ಕೃತಿ ಸಂಪುಟ, ವರ್ಷದ ಅಂತ್ಯದಲ್ಲಿ ಶಿಕ್ಷಕರು ಮಗುವಿನ ಸಾಧನೆ ಮತ್ತು ವ್ಯಕ್ತಿತ್ವದ ಬಗ್ಗೆ ಅಭಿಪ್ರಾಯ ಟಿಪ್ಪಣಿ ಬರೆದು ಮುಂದಿನ ತರಗತಿಗೆ ಹಸ್ತಾಂತರಿಸಿ.
* ಶಿಕ್ಷಕರು ಪ್ರತಿ ಘಟಕದಲ್ಲಿ ವಿದ್ಯಾರ್ಥಿ ಪಡೆದ ಅಂಶಗಳೂ ಮತ್ತು ಶ್ರೇಣಿಗಳನ್ನು ತಮ್ಮ ವೈಯಕ್ತಿಕ ದಾಖಲೆಯಲ್ಲಿ ಈ ನಮೂನೆಯಲ್ಲಿ ದಾಖಲಿಸಿ.

| ಕ್ರ.ಸಂ | ವಿದ್ಯಾರ್ಥಿಯ ಹೆಸರು | | ? ? -1 | ? ? -2 | ? ? -3 | ? ? -4 |
|---|---|---|---|---|---|---|
| | | A | | | | |
| | | B | | | | |
| | | A | | | | |
| | | B | | | | |
| | | A | | | | |
| | | B | | | | |

A – ಎಂದರೆ ಜ್ಞಾನಾತ್ಮಕ ವಲಯ

B – ಎಂದರೆ ತೊಡಗಿಸಿಕೊಳ್ಳುವಿಕೆ (ಮೌಲ್ಯಗಳು, ಆಸಕ್ತಿ ಮತ್ತು ಮನೋಧೋರಣೆಗಳು)

* ವಿದ್ಯಾರ್ಥಿಗಳು ಗುಂಪಿನಲ್ಲಿ / ವೈಯಕ್ತಿಕವಾಗಿ ಬರೆದಿರುವ ಯೋಜನೆಗಳು, ಸ್ವಪ್ರೇರಿತ ಕಾರ್ಯಗಳು, ರಚಿಸಿರುವ ಭೂಪಟಗಳು ಇತ್ಯಾದಿಗಳನ್ನು ಸಂಗ್ರಹಿಸಿ ಸಂರಕ್ಷಿಸುವುದು.

## ಘಟಕದ ಹೆಸರು – ನಮ್ಮ ಅತ್ಯಂತ ಪ್ರಾಚೀನ ನಗರಗಳು

| ವಲಯಗಳು | ಕಲಿಕಾ ನಿರ್ದಿಷ್ಟಗಳು |
|---|---|
| ಜ್ಞಾನಾತ್ಮಕ | ✍ ಸಿಂಧೂ ನಾಗರೀಕತೆಯ ವಿಶಿಷ್ಟ ? ? ?ಯೋಜನೆ, ಪ್ರಮುಖ ? ? ? ? ? ಬಗ್ಗೆ ಮಾಹಿತಿ ಸಂಗ್ರಹಿಸುವರು.<br>✍ ಅಂದಿನ ಆರ್ಥಿಕ ಪರಿಸ್ಥಿತಿ ಸಾಮಾಜಿಕ ಜೀವನ, ಲಿಪಿ, ಕ್ರೀಡೆ & ವಿನೋದ ಚಟುವಟಿಕೆಗಳ ಬಗ್ಗೆ ಅರಿಯುವರು. |
| ತೊಡಗಿಸಿಕೊಳ್ಳುವಿಕೆ | ✍ ಸಿಂಧೂ ನಾಗರೀಕತೆಯ ಅವನತಿಗೆ ಕಾರಣವಾದ ಅಂಶಗಳನ್ನು ಅರ್ಥೈಸಿಕೊಂಡು, ನೆಲ-? ?ಸಂರಕ್ಷಣೆಯ ಮಹತ್ವವನ್ನು ಅರಿಯುವರು.<br>✍ ಐತಿಹಾಸಿಕ ಅವಶೇಷಗಳ ರಕ್ಷಣೆ ನಮ್ಮೆಲ್ಲರ ಹೊಣೆ ಎಂಬುದನ್ನು ಮನದಟ್ಟು ಮಾಡಿಕೊಳ್ಳುವರು. |

ಮಕ್ಕಳು ತಮ್ಮ ಮನೆಯಲ್ಲಿರುವ ಹಳೆಯ ವಸ್ತುವನ್ನು ಗುರುತಿಸಿ, ಇದನ್ನು ಯಾರು ಬಳಸುತ್ತಿದ್ದರು? ಎಂಬುದನ್ನು ಗುರುತಿಸಿಕೊಂಡು ಬಂದು ತರಗತಿಯಲ್ಲಿ ಚರ್ಚಿಸುವರು. ಶಿಕ್ಷಕರು ಆ ವಸ್ತುಗಳು, ಇತಿಹಾಸದಲ್ಲಿ ಹೇಗೆ ಮಹತ್ವ ಪಡೆಯುತ್ತವೆಂಬುದನ್ನು ಮಕ್ಕಳು ಅರಿಯುವಂತೆ ಅನುಕೂಲಿಸುವರು.

* ವಿದ್ಯಾರ್ಥಿ ತಂಡಗಳು ಪಠ್ಯಪುಸ್ತಕದಲ್ಲಿ ಸಿಂಧೂ ನಾಗರಿಕತೆಗೆ ಸಂಬಂಧಿಸಿದ ಮಾಹಿತಿಗಳನ್ನೊಳಗೊಂಡ ವಿವರಗಳ ಕಾರ್ಡ್ ನೆರವಿನಿಂದ ಅಧ್ಯಯನ ಮಾಡುವರು. ಸಿಂಧೂ ನಾಗರಿಕತೆಯ ಯಾವ ಅಂಶಗಳ ಬಗ್ಗೆ ಮಂಡನೆ ಮಾಡಲು ಬಯಸುತ್ತಾರೆ ಎಂಬುದನ್ನು ಶಿಕ್ಷಕರು ಕಪ್ಪುಹಲಗೆಯ ಮೇಲೆ ನಮೂದಿಸುವರು.
* ತಮ್ಮ ತಂಡದ ವಿಷಯಕ್ಕೆ ಸಂಬಂಧಿಸಿದಂತೆ ಮಂಡಿಸಬೇಕಾದ ಅಂಶಗಳನ್ನು ಮತ್ತು ಬೇರೆ ತಂಡಗಳು ಕೇಳಬಹುದಾದ ಪ್ರಶ್ನೆಗಳನ್ನು ಮಕ್ಕಳು ಚರ್ಚಿಸಿ ಸಿದ್ಧಪಡಿಸಿಕೊಳ್ಳುವರು.
* ಮಕ್ಕಳು ಹೇಗೆ ಈ ಕಾರ್ಯದಲ್ಲಿ ಪಾಲ್ಗೊಂಡಿದ್ದಾರೆ ಎಂಬುದನ್ನು ಶಿಕ್ಷಕರು ದಾಖಲಿಸುವರು ಹಾಗೂ ವೀಕ್ಷಿಸಿ ಸಂದರ್ಭಾನುಸಾರ ಸಲಹೆ ಮತ್ತು ಮಾರ್ಗದರ್ಶನ ನೀಡುವರು.
* ಶಿಕ್ಷಕರು, ಮಕ್ಕಳು ತಂಡಗಳಲ್ಲಿ ನಿರ್ವಹಿಸುವ ಕಾರ್ಯ ಸ್ವರೂಪದ ವೈಶಿಷ್ಟ್ಯತೆಗಳನ್ನು ಗುರುತಿಸಿ ತಮ್ಮ ಡೈರಿಯಲ್ಲಿ ನಮೂದಿಸುವರು.

**ಶಿಕ್ಷಕರ ಡೈರಿ :**

| ಉದಾ: | ದಿನಾಂಕ | ತರಗತಿ | ವಿಷಯ | ವಿದ್ಯಾರ್ಥಿ ಹೆಸರು | ವೈಶಿಷ್ಟ್ಯತೆ |
|---|---|---|---|---|---|
| | 20/06/12 | 5ನೇ | ಸಮಾಜ ವಿಜ್ಞಾನ | ಗೀತಪ್ರಿಯ | ತಾನು ಮಂಡನೆ ಮಾಡುವುದಿಲ್ಲ, ಭಯವಾಗುತ್ತೆ ಎನ್ನುತ್ತಿದ್ದಾಳೆ. |

* ಇದೆಲ್ಲವೂ ಒಂದು ಅವಧಿಯಲ್ಲಿ ನಡೆದರೆ, ಮುಂದಿನ ಅವಧಿಯಲ್ಲಿ ಪ್ರಾರಂಭದ ಮೊದಲ 10 ನಿಮಿಷಗಳು ಗುಂಪಿನಲ್ಲಿ ಚರ್ಚಿಸಲು ಅವಕಾಶ ನೀಡಿ, ನಂತರ ತಂಡಗಳು ಸಿಂಧೂ ನಾಗರಿಕತೆಯ ಒಂದೊಂದು ಅಂಶಗಳನ್ನು ಮಂಡಿಸುವರು. ಪ್ರತಿ ತಂಡದ ಮಂಡನೆ ನಂತರ ಉಳಿದ ತಂಡಗಳು ಪ್ರಶ್ನೆಗಳನ್ನು ಕೇಳುವರು.
* ಪ್ರಶ್ನೆ ಕೇಳಲು ಮತ್ತು ಉತ್ತರಿಸಲು ಎಲ್ಲರಿಗೂ ಅವಕಾಶ ದೊರೆಯುವಂತೆ ಶಿಕ್ಷಕರು ಅನುಕೂಲಿಸುವರು. ಶಿಕ್ಷಕರು ವಿದ್ಯಾರ್ಥಿಗಳ ಭಾಗವಹಿಸುವಿಕೆ, ಅವರ ವಿಷಯ ಮಂಡನೆಯನ್ನು ವೀಕ್ಷಿಸಿ ತಾಳೆಪಟ್ಟಿಯಲ್ಲಿ ದಾಖಲಿಸುವರು.

**ತಾಳೆ ಪಟ್ಟಿ**

**ಜ್ಞಾನಾತ್ಮಕ – A**

| ಕ್ರ.ಸಂ | ಗಮನಿಸಬೇಕಾದ ಅಂಶಗಳು | ಹೌದು | ಇಲ್ಲ |
|---|---|---|---|
| 1 | ಕೊಟ್ಟಿರುವ ವಿಷಯದ ಬಗ್ಗೆ ಮಗು ಅಧ್ಯಯನ ಮಾಡಿದೆಯೇ? | | |
| 2 | ಪರಿಕಲ್ಪನೆ ಮಗುವಿಗೆ ಅರ್ಥವಾಗಿದೆಯೇ? | | |
| 3 | ಪ್ರಶ್ನೆಗಳನ್ನು ತಾನೇ ಸ್ವತಃ ರೂಪಿಸಿಕೊಂಡಿದೆಯೇ? | | |
| 4 | ಪ್ರಶ್ನೆ ಅರ್ಥ ಮಾಡಿಕೊಂಡು ಉತ್ತರಿಸಿದೆಯೇ? | | |
| 5 | ಪಠ್ಯ ವಿಷಯವನ್ನು ತನ್ನ ನಿತ್ಯ ಜೀವನಕ್ಕೆ ಅನ್ವಯ ಮಾಡಿಕೊಂಡು ಉದಾಹರಣೆ ನೀಡುತ್ತಿದೆಯೇ? | | |

ಮಕ್ಕಳ ಕಾರ್ಯವೈಖರಿಯನ್ನು ಗಮನಿಸಿ ಪ್ರತಿಯೊಂದಕ್ಕೂ 1 ಅಂಶ ನೀಡುವುದು. ಅಧ್ಯಯನದ ಬಗ್ಗೆ ಅವಲೋಕಿಸಿ ಮಕ್ಕಳನ್ನು ಗುಂಪಿನಲ್ಲಿ ಕಾರ್ಯ ನಿರ್ವಹಿಸುವಾಗ ಮತ್ತು ಮಂಡಿಸುವಾಗ ಶಿಕ್ಷಕರು ಮೌಲ್ಯಮಾಪನ ಮಾಡುವರು.

**ತೊಡಗಿಸಿಕೊಳ್ಳುವಿಕೆ – ಬಿ**

**ಚಟುವಟಿಕೆ : 2**

**ಅಭಿಪ್ರಾಯ ಸಂಗ್ರಹ ಪಟ್ಟಿ :**

ಸೂಚನೆ : ಈ ಕೆಳಗಿನವುಗಳ ಬಗ್ಗೆ ಒಂದೊಂದು ಅಭಿಪ್ರಾಯ ಬರೆಯಿರಿ.

1) ಸಿಂಧೂ ನಾಗರೀಕತೆಯಲ್ಲಿ ನಾನು ಮೆಚ್ಚುವ ಅಂಶ ಮತ್ತು ಕಾರಣ.

2) ಸಿಂಧೂ ನಾಗರೀಕತೆ ಅವನತಿಗೆ ಕಾರಣಗಳನ್ನು ಅರ್ಥ ಮಾಡಿಕೊಂಡ ನಂತರ ನನಗೆ ತಿಳಿದುಬಂದಿದ್ದು.........

3) ಪರಿಸರ ರಕ್ಷಣೆಯನ್ನು ನಾನು ಹೀಗೆ ಮಾಡುವೆ?

4) ಐತಿಹಾಸಿಕ ಕಟ್ಟಡಗಳನ್ನು ನಾವು ಏಕೆ ಸಂರಕ್ಷಿಸಬೇಕು?

5) ನಮ್ಮ ಊರಿನಲ್ಲಿರುವ ಸ್ಮಾರಕಗಳನ್ನು ಅಥವಾ ಅವಶೇಷಗಳನ್ನು ನಾನು ಹೀಗೆ ಸಂರಕ್ಷಿಸುವೆ?

ಅಭಿಪ್ರಾಯ ಸಂಗ್ರಹಣೆಯ ಪಟ್ಟಿಯಲ್ಲಿ ಮಕ್ಕಳು ತಮ್ಮ ಅಭಿಪ್ರಾಯ ನೀಡುವರು. (5ನೇ ತರಗತಿ ವಿದ್ಯಾರ್ಥಿಗಳಾಗಿರುವುದರಿಂದ ಒಂದೊಂದು ಅಭಿಪ್ರಾಯವನ್ನು ಪರಿಗಣಿಸಿ ಒಂದೊಂದು ಅಂಕ ನೀಡಬಹುದು). ಈ ಹಿಂದೆ ಚರ್ಚಿಸಿರುವ ನಮೂನೆಯಲ್ಲಿ ಅಂಕ ಮತ್ತು ಗ್ರೇಡ್‌ಗಳನ್ನು ನಮೂದಿಸುವುದು.

**ಪರಿಹಾರಾತ್ಮಕ ಚಟುವಟಿಕೆ :** ಮಕ್ಕಳೊಂದಿಗೆ ಚರ್ಚಿಸಿ, ಸಲಹೆ ನೀಡಿ ಪರಿಹಾರಾತ್ಮಕ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು. ತದನಂತರ ಜ್ಞಾನಾತ್ಮಕ ಮತ್ತು ತೊಡಗಿಸಿಕೊಳ್ಳುವಿಕೆಯ ಕಾರ್ಡ್‌ಗಳ ಮರುಬಳಕೆಯ ನಂತರ ಗ್ರೇಡ್ ದಾಖಲಿಸುವುದು.

**ಗಮನಿಸಿ :**

ಚಟುವಟಿಕೆ ಅಂತ್ಯದಲ್ಲಿ ಪರಿಹಾರ ರೂಪಿಸಿರುವ ಬದಲಾಗಿ ಮಕ್ಕಳು ಗುಂಪಿನಲ್ಲಿ ಕಾರ್ಯ ನಿರ್ವಹಿಸುವಾಗಲೇ ಶಿಕ್ಷಕರು ಗಮನಿಸಿ ಇಂತಹ ಮಕ್ಕಳಿಗೆ ಸಲಹೆ ಮಾರ್ಗದರ್ಶನ ನೀಡುವುದು. ಆತ್ಮವಿಶ್ವಾಸ ಬೆಳೆಸುವುದು ಅತಿಮುಖ್ಯ ಹಾಗೂ ಇದೇ ರೂಪಣಾತ್ಮಕ ಮೌಲ್ಯಮಾಪನದ ಮೂಲ ಉದ್ದೇಶ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು.

## ಘಟಕದ ಹೆಸರು–ಕುಟುಂಬ, ಸಮುದಾಯ ಮತ್ತು ಸಮಾಜ

| ? ? ? | ಕಲಿಕಾ ಉದ್ದೇಶಗಳು |
|---|---|
| ಜ್ಞಾನಾತ್ಮಕ<br><br>ತೊಡಗಿಸಿಕೊಳ್ಳುವಿಕೆ | ✍ ಕುಟುಂಬ ಜೀವನದ ಮಹತ್ವವನ್ನು ಅರಿತುಕೊಳ್ಳುವರು.<br>✍ ಸಮುದಾಯದ ಗುಣಲಕ್ಷಣಗಳು ಹಾಗೂ ಪ್ರಕಾರಗಳನ್ನು ಗುರುತಿಸುವರು.<br>✍ ವಂಶವೃಕ್ಷ ರಚಿಸುವ ಕೌಶಲ ಬೆಳೆಸಿಕೊಳ್ಳುವರು. |

## ಚಟುವಟಿಕೆ – 1 ನನ್ನ ವಂಶವೃಕ್ಷ :

ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೆ ಒಂದು ವಂಶ ವೃಕ್ಷದ ಮಾದರಿ ನೀಡುವುದು. ಆ ಮಾದರಿಯನ್ನು ಅಭ್ಯಾಸ ಮಾಡಿ ಪ್ರತಿ ಮಗುವೂ ತನ್ನ ವಂಶವೃಕ್ಷವನ್ನು ರಚಿಸಿ ನಂತರ ವಂಶವೃಕ್ಷದಲ್ಲಿರುವ ವ್ಯಕ್ತಿಗಳೊಂದಿಗೆ ತನ್ನ ಸಂಬಂಧವನ್ನು ಗುರುತಿಸಿ ಬರೆಯುವಂತೆ ಶಿಕ್ಷಕರು ಅನುಕೂಲಿಸುವರು.

ಮಕ್ಕಳು ತಮ್ಮ ಸ್ವಮೌಲ್ಯಮಾಪನ ಮಾಡಿಕೊಂಡು ಕಾರ್ಡಿನಲ್ಲಿ ನಮೂದಿಸುವರು.

| ಕ್ರ.ಸಂ | ನನ್ನ ಅಂಶಗಳು | ಹೌದು | ಇಲ್ಲ |
|---|---|---|---|
| 1 | ನಾನು ವಂಶವೃಕ್ಷ ಓದುವ ಕ್ರಮ ತಿಳಿದುಕೊಂಡೆ. | | |
| 2 | ನನಗೆ ವಂಶವೃಕ್ಷ ರಚಿಸುವ ವಿಧಾನ ಗೊತ್ತಾಯಿತು. | | |
| 3 | ಶಿಕ್ಷಕರು ಮತ್ತು ಸ್ನೇಹಿತರ ಸಲಹೆಯಂತೆ ನಾನು ವಂಶವೃಕ್ಷವನ್ನು ಪುನರ್‌ರಚಿಸಿದ್ದೇನೆ. | | |

(ಪ್ರತಿ ಹೌದು ಎಂಬುದಕ್ಕೆ 1 ಅಂಶದಂತೆ ಒಟ್ಟು 2 ಅಂಶಗಳು, ಅಂದವಾದ ಮತ್ತು ಸರಿಯಾದ ವಂಶವೃಕ್ಷಕ್ಕೆ 2 ಅಂಶಗಳು ಒಟ್ಟು 5 ಅಂಶಗಳು ಬಿ ವಿಭಾಗಕ್ಕೆ, ಸಂಬಂಧಗಳ ಪರಿಕಲ್ಪನೆ (ಎ)1 ಅಂಶ.

**ಚಟುವಟಿಕೆ – 2 ಮನೆ ಮತ್ತು ಶಾಲೆ ಏಕೆ ಬೇಕು?**

ನನಗೆ ನನ್ನ ಕುಟುಂಬ ಏಕೆ ಬೇಕು? ನನ್ನ ಶಾಲೆ ಏಕೆ ಬೇಕು? ಎಂಬ ವಿಷಯದ ಬಗ್ಗೆ ಪ್ರತಿಯೊಂದು ವಿದ್ಯಾರ್ಥಿಯು ತನ್ನ ಅನಿಸಿಕೆ ತಿಳಿಸುವರು ಮತ್ತು ಬರೆಯುವರು.

(ಪ್ರತಿ ಅನಿಸಿಕೆಗೆ 1/2 ಅಂಕ, ಒಟ್ಟು – 1 ಅಂಕ)

**ಚಟುವಟಿಕೆ – 3**

ಪ್ರತಿ ಗುಂಪಿಗೆ ಅವಿಭಕ್ತ ಕುಟುಂಬ ಮತ್ತು ವಿಭಕ್ತ ಕುಟುಂಬದ ಚಿತ್ರಗಳನ್ನು ನೀಡಿ, ಚಿತ್ರಗಳ ಮೂಲಕ ಮಕ್ಕಳು ವಿವಿಧ ಮಾದರಿ ಕುಟುಂಬಗಳ ವಿಶ್ಲೇಷಣೆ ಮಾಡುವರು. ಕಂಡುಬಂದ ಅಂಶಗಳನ್ನು ಬರೆಯುವರು.

(ಪರಿಕಲ್ಪನೆಗೆ – 2 ಅಂಶ)

**ಚಟುವಟಿಕೆ – 4**

ಗ್ರಾಮೀಣ ಸಮುದಾಯ, ನಗರ ಸಮುದಾಯ ಮತ್ತು ಆದಿವಾಸಿ ಸಮುದಾಯ ಎಂದು ಬರೆದಿರುವ 3 ವಿಷಯಗಳಲ್ಲಿ ತಮಗೆ ಬೇಕಾದ ವಿಷಯವನ್ನು ಮತ್ತು ಚಿತ್ರಗಳನ್ನು ಆಯ್ಕೆ ಮಾಡಿಕೊಳ್ಳಲು ಮಕ್ಕಳಿಗೆ ಶಿಕ್ಷಕರು ಅನುಕೂಲಿಸುವರು.

ಚಿತ್ರಗಳ ಸಹಾಯದಿಂದ ಮಕ್ಕಳು ತಮಗೆ ತಿಳಿದ ವಿಷಯಗಳನ್ನು ಗುಂಪಿನಲ್ಲಿ ಚರ್ಚಿಸಿ ತರಗತಿಯಲ್ಲಿ ಮಂಡಿಸುವರು. (ವಿಷಯ ಮಂಡನೆಗೆ 1 ಅಂಶ).

* ಶಿಕ್ಷಕರು 4 ಚಟುವಟಿಕೆಯ ಎಲ್ಲಾ ಎ ವಿಭಾಗದ ಅಂಶಗಳನ್ನು ಸೇರಿಸಿದ, ಶ್ರೇಣಿ ನಮೂದಿಸುವುದು.

* ಪ್ರತಿ ಚಟುವಟಿಕೆ ನಡೆಯುವಾಗ ಮತ್ತು ನಂತರ ಮಕ್ಕಳನ್ನು ವೀಕ್ಷಿಸಿ ಶಿಕ್ಷಕರು ಸಂದರ್ಭಾನುಸಾರ ಅಗತ್ಯವಿರುವ ಮಕ್ಕಳಿಗೆ ಸಲಹೆ, ಮಾರ್ಗದರ್ಶನ, ಪೂರಕ ಮಾಹಿತಿ, ಹಿಮ್ಮಾಹಿತಿ ಚಟುವಟಿಕೆ ನೀಡುವರು.
* ಹಿಮ್ಮಾಹಿತಿಗೆ ಒಳಪಟ್ಟ ಮಕ್ಕಳ ಶ್ರೇಣಿಯನ್ನು ಅಂತ್ಯದಲ್ಲಿ ನಮೂದಿಸಬೇಕು.

**ಗಮನಿಸಿ :** ಮಕ್ಕಳ ತೊಡಗಿಸಿಕೊಳ್ಳುವಿಕೆಯನ್ನು ಶ್ರೇಣೀಕರಿಸಲು ಮಕ್ಕಳ ವರ್ತನೆಗಳನ್ನು ಶಿಕ್ಷಕರು ವೀಕ್ಷಣೆಯ ಆಧಾರದ ಮೇಲೆ ಶ್ರೇಣಿ ನೀಡಬಹುದು. ಅಗತ್ಯವಿದ್ದಲ್ಲಿ ಅವಲೋಕನದ ಆಧಾರಗಳನ್ನು ತಯಾರಿಸಿಕೊಂಡು ನಿರ್ಧರಿಸಬಹುದು.

## ಭೂಮಿ ನಮ್ಮ ಮಾತೃಗೃಹ

| ??? | ಕಲಿಕಾ ಉದ್ದೇಶಗಳು |
|---|---|
| ಜ್ಞಾನಾತ್ಮಕ-A | ಸೂರ್ಯ ಮತ್ತು ಸೂರ್ಯನ ಪರಿವಾರವನ್ನು ಅರ್ಥೈಸಿಕೊಳ್ಳುವುದು.<br>ಭೂಮಿಯ ವಿಶಿಷ್ಟತೆ, ಆಕಾರ ಮತ್ತು ಗಾತ್ರವನ್ನು ತಿಳಿದುಕೊಳ್ಳುವುದು.<br>ಚಂದ್ರನ ವಿವಿಧ ಪ್ರಾಕೃತಿಕ ಲಕ್ಷಣಗಳು ವಿವಿಧ ಕಲೆಗಳನ್ನು ಗುರುತಿಸುವರು.<br>ಗ್ರಹಣ ಬಗ್ಗೆ ಅರಿಯುವರು. |
| ತೊಡಗಿಸಿಕೊಳ್ಳುವಿಕೆ<br>-B | ಮಾದರಿಗಳನ್ನು ತಯಾರಿಸುವರು.<br>ಸೌರವ್ಯೂಹದ ಪಾತ್ರಾಭಿನಯ ಮಾಡುವರು.<br>(ಅಭಿನಯದ ಮೂಲಕ ಪರಿಕಲ್ಪನೆ ಅರ್ಥೈಸುವರು) |

**ಚಟುವಟಿಕೆ – 1**

ಮಕ್ಕಳು ಪ್ರತಿದಿನ ಹಗಲು ಮತ್ತು ರಾತ್ರಿಯ ವೇಳೆಯಲ್ಲಿ ಆಕಾಶದಲ್ಲಿ ಏನೇನು ಕಾಣುತ್ತವೆ ಎಂಬುದನ್ನು ತರಗತಿಯಲ್ಲಿ ವ್ಯಕ್ತಪಡಿಸುವರು. ನಂತರ ಮಕ್ಕಳು 9 ವಿದ್ಯಾರ್ಥಿಗಳು ಇರುವಂತೆ ಗುಂಪುಗಳನ್ನು ಮಾಡಿಕೊಳ್ಳುವರು. ಗುಂಪಿನಲ್ಲಿ ಸೌರ ಪರಿವಾರದ ಪಾತ್ರಗಳನ್ನು ಹಂಚಿಕೊಳ್ಳುವರು. ನಂತರ ಪ್ರತಿಯೊಂದು ತಂಡವು ಸೌರವ್ಯೂಹವನ್ನು ತಮ್ಮ ಪಾತ್ರ/ಸ್ಥಾನದ ಮೂಲಕ ಪರಿಚಯಿಸುವರು. ಮಕ್ಕಳ ಈ ಚಟುವಟಿಕೆಗೆ ಶಿಕ್ಷಕರು ಅನುಕೂಲಕರಾಗಿ ಕಾರ್ಯ ನಿರ್ವಹಿಸುವರು.

**ಸೌಲಭ್ಯವಿದ್ದಲ್ಲಿ ಸೌರಮಂಡಲದ ಸಿ.ಡಿ. ಪ್ರದರ್ಶನ ವೀಕ್ಷಿಸಲು ಮಕ್ಕಳಿಗೆ ಅವಕಾಶ ಮಾಡಿಕೊಡಬಹುದು.**

ಈ ಚಟುವಟಿಕೆಯ ನಂತರ ಎಲ್ಲಾ ಮಕ್ಕಳೂ ಪ್ರದರ್ಶನದಿಂದ ಏನೇನು ತಿಳಿದರು ಎಂಬುದನ್ನು ಹಾಳೆಯಲ್ಲಿ ದಾಖಲಿಸುವರು. (ಮಕ್ಕಳ ದಾಖಲೆಯನ್ನು ಆಧರಿಸಿ ಅಂಶಗಳನ್ನು ನೀಡುವುದು. ಎಲ್ಲಾ ಮಾಹಿತಿಗಳು ಇದ್ದಲ್ಲಿ 2 ಅಂಕ ನೀಡುವುದು).

**ಚಟುವಟಿಕೆ – 2**

**ಭೂಮಿಯ ನಿರ್ಮಾಣ ವಿಧಾನ : ಪ್ರಾಯೋಗಿಕ, ತಂತ್ರ – ಕಾರ್ಯವೀಕ್ಷಣೆ :**

ಮಕ್ಕಳು ತಂಡಗಳಲ್ಲಿ ಕುಳಿತು ಭೂಮಿಯ ಮಾದರಿಯನ್ನು ಕಾಗದ, ಮಣ್ಣಿನ ಸಹಾಯದಿಂದ ತಯಾರಿಸುವರು. ಶಿಕ್ಷಕರು ಹಿಮ್ಮಾಹಿತಿಯನ್ನು ಪಡೆದು ಆಕಾರವನ್ನು ಸರಿಪಡಿಸುವರು. ಕಡ್ಡಿಯನ್ನು ಬಳಸಿ ಭೂ ಅಕ್ಷವನ್ನು ಗುರುತಿಸುವರು.

ಚಟುವಟಿಕೆ :

* ಕಾಗದ, ಮಣ್ಣಿನ ಸಹಾಯದಿಂದ ಭೂಮಿಯ ಮಾದರಿ ತಯಾರಿಕೆ
* ಭೂ ಅಕ್ಷ ಗುರುತಿಸುವಿಕೆ
* ಭೂಮಿಯ ಗಾತ್ರ ವಿವರವನ್ನು ಒಳಗೊಂಡ ಮತ್ತು ವಿವರದ ಚಾರ್ಟ್ ತಯಾರಿಸುವರು.

(ಶಿಕ್ಷಕರು ಮಕ್ಕಳ ಕಾರ್ಯ ಸ್ವರೂಪವನ್ನು ಗಮನಿಸಿ, ಹಿಮ್ಮಾಹಿತಿ ನೀಡುವರು ಹಾಗೂ ಮಕ್ಕಳ ಕೆಲಸಕ್ಕೆ ಅನುಕೂಲಿಸುವರು).

* ಪ್ರತಿಯೊಬ್ಬರು ತಾವು ತಯಾರಿಸಿದ ಭೂಮಿಯ ಮಾದರಿ ಪ್ರದರ್ಶಿಸುವರು. ಮಕ್ಕಳ ಮಾದರಿಗಳನ್ನು ತಯಾರಿಸಿದ ನಂತರ ಸ್ವಮೌಲ್ಯ ಮಾಪನ ಮಾಡಿಕೊಳ್ಳುವರು.

## ಸ್ವಮೌಲ್ಯಮಾಪನ ಕಾರ್ಡ್

| ಕ್ರ.ಸಂ. | ತನ್ನ ಅಂಶಗಳು | ಹೌದು | ಇಲ್ಲ |
|---|---|---|---|
| 1 | ಭೂಮಿಯ ಆಕಾರಕ್ಕೆ ಅನುಗುಣವಾಗಿ ಮಾದರಿ ತಯಾರಿಸಿದ್ದೇನೆ. | | |
| 2 | ಶಿಕ್ಷಕರು ನೀಡಿರುವ ಸೂಚನೆಗಳನ್ನು ಸರಿಯಾಗಿ ಪಾಲಿಸಿದ್ದೇನೆ. | | |
| 3 | ಸ್ಥಳೀಯವಾಗಿ ದೊರೆಯುವ ಪರಿಕರಗಳನ್ನು ಬಳಸಿದ್ದೇನೆ. | | |
| 4 | ಶಿಕ್ಷಕರ ಸಲಹೆ ಮತ್ತು ಸ್ನೇಹಿತರ ನೆರವಿನಿಂದ ಮಾದರಿಯನ್ನು ಪುನಃ ರೂಪಿಸಿದ್ದೇನೆ. | | |

ಸ್ವಮೌಲ್ಯಮಾಪನಗಳು ಮಕ್ಕಳು ಅಂತರಾವಲೋಕನ ಮಾಡಿಕೊಳ್ಳಲು ಸೀಮಿತವಾಗಿರುತ್ತದೆ. ಶಿಕ್ಷಕರು ಅವುಗಳನ್ನು ಅವಲೋಕಿಸಬಾರದು. ಮಕ್ಕಳೇ ಇಷ್ಟಪಟ್ಟಲ್ಲಿ ಇತರೆ ಮಕ್ಕಳೊಂದಿಗೆ ಚರ್ಚಿಸಬಹುದು. ಶಿಕ್ಷಕರು ಇಂತಹ ಸಂದರ್ಭದಲ್ಲಿ ಮಕ್ಕಳ ಮಾದರಿಗಳನ್ನು ಮತ್ತು ಅದರ ಹಿಮ್ಮಾಹಿತಿಯನ್ನು ಆಧರಿಸಿ 3 ಅಂಶಗಳ ಆಧಾರದಲ್ಲಿ ಅಂಕ ನೀಡುವುದು.

(ಮಾದರಿ ತಯಾರಿಕೆ – 1 ಅಂಕ, ಚಾರ್ಟ್ ತಯಾರಿಕೆ – 1 ಅಂಕ, ಪರಿಕಲ್ಪನೆ – 1 ಅಂಕ)

**ಚಟುವಟಿಕೆ – 3**

**ಚರ್ಚೆ – ನಾ ಕಂಡ ಚಂದಿರ**

* ಮಕ್ಕಳಿಗೆ ಈ ಪಾಟದ ಪೂರ್ವದಲ್ಲಿಯೇ 15–20 ದಿವಸ ಮುಂಚಿತವಾಗಿ ಪ್ರತಿ ರಾತ್ರಿ ಆಕಾಶ ವೀಕ್ಷಣೆ ಮಾಡಿ ಚಂದ್ರನ ಆಕಾರ (ಕಣ್ಣಿಗೆ ಕಾಣುವ ಅಂಶಗಳನ್ನು) ವೀಕ್ಷಿಸಿ ಅದನ್ನು ಚಿತ್ರದ ಮೂಲಕ ದಾಖಲಿಸುವಂತೆ ಶಿಕ್ಷಕರು ಅನುಕೂಲಿಸುತ್ತಾರೆ.
* ಮಕ್ಕಳು 4 ಗುಂಪಿನಲ್ಲಿ ಕುಳಿತು, ತಾವು ಗಮನಿಸಿದ ಅಂಶಗಳನ್ನು ಚರ್ಚೆ ಮಾಡುವರು.
* ಪ್ರತಿ ತಂಡದಿಂದ ಒಬ್ಬ ವಿದ್ಯಾರ್ಥಿ ಕಲಿಕಾ ಕೇಂದ್ರಕ್ಕೆ ಹೋಗಿ ಚಂದ್ರನಿಗೆ ಸಂಬಂಧಿಸಿದ ಮಾಹಿತಿ ಕಾರ್ಡುಗಳನ್ನು ತರುವನು. ಆ ಕಾರ್ಡ್‌ಗಳಲ್ಲಿನ ವಿವರಗಳನ್ನು ತಾವು ವೀಕ್ಷಿಸಿದ ಅಂಶಗಳೊಂದಿಗೆ ಹೋಲಿಸುವರು.
* ನಂತರ ತಂಡದ ಗುಂಪಿನಲ್ಲಿ ಮೌಲ್ಯಮಾಪನ ಮಾಡುವರು.
* ಒಂದು ಮಗು ಇನ್ನೊಬ್ಬರನ್ನು ಪ್ರಶ್ನೆ ಕೇಳಿ ನಂತರ ಕಾರ್ಡುಗಳಲ್ಲಿ ನಮೂದಿಸುವಂತೆ ಶಿಕ್ಷಕರು ಮಾರ್ಗದರ್ಶನ ನೀಡುವರು.

ಈ ಕಾರ್ಡನ್ನು ತಂಡದವರು ಭರ್ತಿ ಮಾಡಲು ಪ್ರಶ್ನಾವಳಿ ಕಾರ್ಡಿನಲ್ಲಿರುವ ಪ್ರಶ್ನಾವಳಿಗಳನ್ನು ಬಳಸುವರು.

**ಪ್ರಶ್ನಾ ಸರಣಿ ಕಾರ್ಡ್ :**

1. ಚಂದ್ರನ ಮೇಲ್ಭಾಗ ಹೇಗಿದೆ?

2. ಚಂದ್ರನಿಗೆ ಎಷ್ಟು ಚಲನಗಳಿವೆ? ಯಾವುವು?

3. ಚಂದ್ರನ ಕಲೆಗಳು ಏಕೆ ಕಾಣುತ್ತೇವೆ?

4. ಕೃಷ್ಣ ಪಕ್ಷ ಮತ್ತು ಶುಕ್ಲಪಕ್ಷ ಎಂದು ಯಾವ ಅವಧಿಯನ್ನು ಕರೆಯುತ್ತೇವೆ? ಸಹಪಾಠಿಗಳ ಮೌಲ್ಯಮಾಪನ ಕಾರ್ಡು ಮತ್ತು ಗುಂಪಿನಲ್ಲಿ ಮಕ್ಕಳ ಅಭಿವ್ಯಕ್ತಿಯನ್ನು ಶಿಕ್ಷಕರು ವೀಕ್ಷಿಸಿ ಹಿಮ್ಮಾಹಿತಿ ನೀಡಿದ ನಂತರ 3 ಅಂಶಗಳ ಆಧಾರದಲ್ಲಿ ಅಂಶ ನೀಡುವರು.

(ಪರಿಕಲ್ಪನೆ – 2 ಅಂಶ, ಗುಂಪಿನಲ್ಲಿ ವರ್ತನೆ – 1 ಅಂಶ)

## ಸಹಪಾಠಿಗಳಿಂದ ಮೌಲ್ಯಮಾಪನ ಕಾರ್ಡು

| ಕ್ರ.ಸಂ. | ವಿದ್ಯಾರ್ಥಿಯ ಹೆಸರು | ಚಂದ್ರನ ಮೇಲ್ಮೈ ಲಕ್ಷಣಗಳನ್ನು ತಿಳಿದು ಕೊಂಡಿದ್ದಾನೆ.<br>ಹೌದು/ಇಲ್ಲ | ಚಂದ್ರನ ಚಲನೆಗಳನ್ನು ತಿಳಿದು ಕೊಂಡಿದ್ದಾನೆ.<br>ಹೌದು/ಇಲ್ಲ | ಚಂದ್ರನ ಕಲೆಗಳ ಬಗ್ಗೆ ಅರಿತು ಕೊಂಡಿದ್ದಾನೆ.<br>ಹೌದು/ಇಲ್ಲ | ಕೃಷ್ಣಪಕ್ಷ ಶುಕ್ಲಪಕ್ಷದ ಬಗ್ಗೆ ತಿಳಿದು ಕೊಂಡಿದ್ದಾನೆ.<br>ಹೌದು/ಇಲ್ಲ | ಸ್ನೇಹಿತರ ಸಹಾಯ ಬೇಕು.<br>ಹೌದು/ಇಲ್ಲ | ಶಿಕ್ಷಕರ ನೆರವು ಬೇಕು<br>ಹೌದು/ಇಲ್ಲ |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |

**ಚಟುವಟಿಕೆ – 4**

**ಗ್ರಹಣಗಳು – ಸಾಧನ ಪ್ರಾಯೋಗಿಕ / ಚಿತ್ರ ರಚನೆ ಕಾರ್ಯ / ಚಿತ್ರ ವೀಕ್ಷಣೆ**

* ತರಗತಿಯಲ್ಲಿರುವ ಮಕ್ಕಳು ತಂಡ ರಚಿಸಿಕೊಂಡು ನಾಯಕನನ್ನು ಆಯ್ಕೆ ಮಾಡಿಕೊಳ್ಳುವರು.
* ನಾಯಕರು ಕಲಿಕಾ ಕೇಂದ್ರದಲ್ಲಿ ವಿಷಯಕ್ಕೆ ಸಂಬಂಧಿಸಿದ ಕಾರ್ಡುಗಳನ್ನು ಆಯ್ಕೆ ಮಾಡುವರು. ಆ ಕಾರ್ಡ್‌ಗಳು ಮತ್ತು ಶಿಕ್ಷಕರ ನೆರವಿನಿಂದ ಸೂರ್ಯ, ಚಂದ್ರ, ಭೂಮಿಯ ಪಾತ್ರವನ್ನು ಅರ್ಥ ಮಾಡಿಕೊಳ್ಳುವರು.

  ಸಮಾಜ ವಿಜ್ಞಾನ ವಿಷಯದಲ್ಲಿ ಒಂದು ಪರಿಕಲ್ಪನೆಗೆ ಸಂಬಂಧಿಸಿದ ಮಾಹಿತಿಗಳನ್ನು ಒಂದು ಕಾರ್ಡ್‌ನಲ್ಲಿ ವಿವರವಾಗಿ ಬರೆದು ಒಂದು ನಿರ್ದಿಷ್ಟ ಸ್ಥಳದಲ್ಲಿ ಇಟ್ಟಿರುವ ಸ್ಥಳವೇ ಕಲಿಕಾ ನಿಲ್ದಾಣ. (Learning Station)
* ಸೂರ್ಯಗ್ರಹಣ ಮತ್ತು ಚಂದ್ರಗ್ರಹಣ ಹೇಗಾಗುತ್ತದೆ? ಎಂಬುದನ್ನು ಅಭಿನಯಿಸಿ ತೋರಿಸುವರು.
* ನಂತರ ಮಕ್ಕಳು ತಂಡಗಳನ್ನು ರಚಿಸಿಕೊಂಡು, ತಮ್ಮ ತಂಡದಲ್ಲಿ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣದಲ್ಲಿ ಸೂರ್ಯ, ಚಂದ್ರ ಮತ್ತು ಭೂಮಿಯ ಸ್ಥಾನಗಳನ್ನು ಚರ್ಚಿಸುವರು.
* ಮಾದರಿಯನ್ನು ಬಳಸುವ ಮೂಲಕ ಗ್ರಹಣಗಳನ್ನು ಪರಿಚಯಿಸುವರು. (ಲಭ್ಯವಿದ್ದಲ್ಲಿ ಮಾದರಿ ಅಥವಾ ವಿವಿಧ ಗಾತ್ರದ ಚೆಂಡುಗಳು ಮತ್ತು ಕ್ಯಾಂಡಲ್ ಮತ್ತು ಬ್ಯಾಟರಿ ಬಳಸಿ)
* ತಂಡದ ಪ್ರತಿಯೊಬ್ಬರು ಸೂರ್ಯಗ್ರಹಣ ಮತ್ತು ಚಂದ್ರಗ್ರಹಣದ ಚಿತ್ರಗಳನ್ನು ರಚಿಸುವರು.
* ಶಿಕ್ಷಕರ ಹಿಮ್ಮಾಹಿತಿಯೊಂದಿಗೆ ಪತ್ರಗಳನ್ನು ಸರಿಪಡಿಸಿಕೊಳ್ಳುವರು. ಮಕ್ಕಳ ಚಿತ್ರಗಳನ್ನು ಆಧರಿಸಿ ಶಿಕ್ಷಕರು 2 ಅಂಕ ನೀಡುವುದು. (ಪರಿಕಲ್ಪನೆಗೆ ಒಂದು ಅಂಶ, ಚಿತ್ರ ರಚನಾ ಕೌಶಲಕ್ಕೆ 1 ಅಂಶ ನೀಡುವುದು)

## ಈ ಘಟಕದ ಎಲ್ಲಾ ಚಟುವಟಿಕೆಗಳ ಅಂಶಗಳಿಂದ ಶ್ರೇಣೀಕರಣ

| | A ವಿಭಾಗ | B ವಿಭಾಗ |
|---|---|---|
| ಚಟುವಟಿಕೆ - 1 | ಪರಿಕಲ್ಪನೆ - 1 | ಅಭಿನಯ |
| ಚಟುವಟಿಕೆ - 2 | ಪರಿಕಲ್ಪನೆ - 1 | ಮಾದರಿ - 1 ಚಾರ್ಟ್ - 1 |
| ಚಟುವಟಿಕೆ - 3 | ಪರಿಕಲ್ಪನೆ - 2 | ಗುಂಪಿನಲ್ಲಿ ವರ್ತನೆ - 1 |
| ಚಟುವಟಿಕೆ - 4 | ಪರಿಕಲ್ಪನೆ - 1 | ಚಿತ್ರ ರಚನೆ ? 1 |
| | 5 | 5 |

ಮಗು ಅಂತಿಮವಾಗಿ ಪಡೆದಿರುವ (ಶಿಕ್ಷಕರ ಹಿಮ್ಮಾಹಿತಿ ನಂತರ) ಅಂಕಗಳನ್ನು ಗಮನಿಸಿ ಶ್ರೇಣಿಗಳನ್ನು ನೀಡುವುದು.

## ಸಮಾಜ ವಿಜ್ಞಾನ ವಿಷಯದಲ್ಲಿ ಸಂಕಲನಾತ್ಮಕ ಮೌಲ್ಯಮಾಪನ :

ಸಂಕಲನಾತ್ಮಕ ಮೌಲ್ಯಮಾಪನದ ಉದ್ದೇಶ, ಲಕ್ಷಣಗಳನ್ನು ತಾವು ಈಗಾಗಲೇ ಅರ್ಥೈಸಿಕೊಂಡಿದ್ದೀರಿ. ಸಮಾಜ ವಿಜ್ಞಾನ ವಿಷಯದಲ್ಲಿ ಸಂಕಲನಾತ್ಮಕ ಮೌಲ್ಯಮಾಪನಕ್ಕೆ ನೆರವಾಗುವ ಅಂಶಗಳು ಹೀಗಿವೆ.

## ಮೌಖಿಕ ಮೌಲ್ಯಮಾಪನ :

* ಯಾರು, ಯಾವಾಗ, ಎಲ್ಲಿ ಪ್ರಶ್ನೆಗಳಿಗೆ ಬದಲಾಗಿ ಮಕ್ಕಳು ತಯಾರಿಸಿರುವ ಯೋಜನೆಗಳು, ಮಾದರಿಗಳು ಚಿತ್ರಕೋಶಗಳನ್ನು ಆಧರಿಸಿ, ಮಾಹಿತಿ ವಿವರಣೆ, ಅಭಿಪ್ರಾಯ ಪಡೆಯುವುದು ಸೂಕ್ತ.

ಉದಾ : 1. ಭೂಮಿಯ ಮಾದರಿ ಬಳಸಿ, ಭೂಮಿಯ ಚಲನೆ ಮತ್ತು ಆಕಾರದ ಬಗ್ಗೆ.

2. ಯೋಜನೆ ಆಧರಿಸಿ ಮಕ್ಕಳು ನೋಡಿರುವ ಒಂದು ಪ್ರೇಕ್ಷಣೀಯ ಸ್ಥಳದ ವಿವರ.

**ಲಿಖಿತ ಪರೀಕ್ಷೆ :** ಪ್ರಶ್ನೆಗಳನ್ನು ರಚಿಸುವಾಗ ಪರಿಕಲ್ಪನೆಯ ಅರ್ಥವಿವರಣೆಗೆ ಹೆಚ್ಚು ಮಹತ್ವ ನೀಡದೆ ವಿಮರ್ಶಾತ್ಮಕ ಚಿಂತನೆ, ನಿರೂಪಣೆ, ಸಮರ್ಥನೆ, ಸಂಬಂಧೀಕರಿಸುವ ಅಂಶಗಳಿಗೆ ಮಹತ್ವ ದೊರಯುವಂತೆ ಪ್ರಶ್ನೆಗಳನ್ನು ರಚಿಸಿ.

ಉದಾ : ಚಂದ್ರಗ್ರಹಣ ಮತ್ತು ಸೂರ್ಯಗ್ರಹಣದಲ್ಲಿ ಸೂರ್ಯ, ಚಂದ್ರ ಭೂಮಿಯ ಸ್ಥಾನಗಳಲ್ಲಿ ಆಗುವ ವ್ಯತ್ಯಾಸ.

ಇತ್ತೀಚಿನ ದಿನಗಳಲ್ಲಿ ವಿಭಕ್ತ ಕುಟುಂಬಗಳು ಹೆಚ್ಚಲು ಕಾರಣಗಳು :

ಹೀಗೆ ಸಂಕಲನಾತ್ಮಕ ಮೌಲ್ಯಮಾಪನವನ್ನು ವಿಭಿನ್ನ ದೃಷ್ಟಿಕೋನದಲ್ಲಿ ಅಳವಡಿಸಿಕೊಳ್ಳುವುದು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಲಕ್ಷಣ ಎಂಬುದನ್ನು ನಾವು ಮತ್ತೊಮ್ಮೆ ಮನನ ಮಾಡಿಕೊಳ್ಳಬೇಕಾಗಿದೆ.

ನಾವು ಇದವರೆಗೂ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನವನ್ನು ಹೇಗೆ ಅಳವಡಿಸಿಕೊಳ್ಳುತ್ತೇವೆ ಎಂಬ ಪ್ರಕ್ರಿಯೆಯನ್ನು ಚರ್ಚಿಸಿದ್ದೇವೆ. ಸಂಕಲನಾತ್ಮಕ ಹಂತ–1 ನಂತರ ಮಗುವಿನ ಪ್ರಗತಿ ಮತ್ತು ಕಾರ್ಯವೈಖರಿಯನ್ನು ಗ್ರೇಡ್‌ಗಳ ಮೂಲಕ ಪ್ರಗತಿ ಪತ್ರದಲ್ಲಿ ನಮೂದಿಸಬೇಕಾಗುತ್ತದೆ. ಎಲ್ಲಾ ಘಟಕಗಳ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನದ ಒಟ್ಟಾರೆ ಸಾಧನೆಯನ್ನು ನಮೂದಿಸುವ ಕ್ರಮವನ್ನು ಈ ಉದಾಹರಣೆಯಲ್ಲಿ ಚರ್ಚಿಸಿದೆ.

| ಕ್ರ.ಸಂ | ವಿದ್ಯಾರ್ಥಿಯ ಹೆಸರು | | ? ? ?1 | | ? ? ? 2 | | ? ? ?3 | | ? ? ?4 | | FA1 | | 10% | | ಸರಾಸರಿ ಶ್ರೇಣಿ |
|---|---|---|---|---|---|---|---|---|---|---|---|---|---|---|---|
| 1 | ಪ್ರಿಯ | A | 4 | A | 4 | A | 4 | A | 5 | A+ | 17 | A | 8.5 | A | A |
| | | B | 3 | B+ | 4 | A | 5 | A+ | 5 | A+ | 17 | A | 8.5 | A | |

**ಗಮನಿಸಿ:**

* A ಮತ್ತು B ಜ್ಞಾನಾತ್ಮಕ ಮತ್ತು ತೊಡಗಿಸಿಕೊಳ್ಳುವುದನ್ನು ಸೂಚಿಸುತ್ತದೆ.

* FA1 ಹಂತಕ್ಕೆ ಎಲ್ಲಾ ಅಂಶಗಳನ್ನು ಪರಿಗಣಿಸಲಾಗುತ್ತದೆ. ಗ್ರೇಡಿಂಗ್ ನಿರ್ಧರಿಸುವಾಗ ನಿರ್ಧಾರಕ ಶ್ರೇಣಿಯನ್ನು ಆಧರಿಸಲಾಗಿದೆ.

* ಶೇ.10ನ್ನು ನಿರ್ಧರಿಸುವಾಗ ಈ ಸೂತ್ರ ನೆರವಾಗುತ್ತದೆ.

<u>ಪಡೆದ ಅಂಶಗಳು x 10</u> ಉದಾ: <u>17 x 10 = 8.5</u>

ಒಟ್ಟು ಅಂಶಗಳು 20

F1ನಲ್ಲಿ A ಮತ್ತು B ಎರಡನ್ನೂ ಸರಾಸರಿ ಮಾಡಿದ ನಂತರ ಸರಾಸರಿ ಗ್ರೇಡನ್ನು ಪ್ರಗತಿ ಪತ್ರದಲ್ಲಿ ನಮೂದಿಸಬೇಕಾಗುತ್ತದೆ.

ಶ್ರೇಣಿ : 9–10 = A+, 7–8.9 = A, 5–6.9 = B+, 3–4.9 = B, 3ಕ್ಕಿಂತ ಕಡಿಮೆ C

* ವರ್ಷದ ಅಂತ್ಯಕ್ಕೆ

| F1 | F2 | S1 | F3 | F4 | S2 | ಒಟ್ಟು |
|---|---|---|---|---|---|---|
| 10% | 10% | 30% | 10% | 10% | 30% | 100% |

ಮಕ್ಕಳ ಒಟ್ಟಾರೆ ಪ್ರಗತಿಯನ್ನು ಈ ರೀತಿ ದಾಖಲಿಸಬೇಕಾಗುತ್ತದೆ.